ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 19-20 ಮೇ 18, 1986 ಬೆಲೆ 60 ಪೈಸೆ

ನಿರುದ್ಯೋಗಿ ಕಾರ್ಮಿಕರ ಸಮಾವೇಶ

ಮೇ ಶತಮಾನೋತ್ಸವದ ಈ ವರ್ಷ ನಮ್ಮ ದೇಶದ ಜನತೆ ಎದುರಿಸುತ್ತಿರುವ ಅತಿ ಭೀಕರ ಸಮಸ್ಯೆಯಾದ ನಿರುದ್ಯೋಗದ ಕುರಿತು ಸರಕಾರದ ಗಮನ ಸೆಳೆದು, ನಿರುದ್ಯೋಗ ನಿವಾರಣೆ ಅಥವಾ ನಿರುದ್ಯೋಗ ಭತ್ತೆ ಕೊಡಿ, ದುಡಿಯುವ ಹಕ್ಕು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಸೇರಿಸಿ ಎಂಬ ಬೇಡಿಕೆಗಳಿಗಾಗಿ ಬೃಹತ್ ಚಳುವಳಿ ಸಂಘಟಿಸಬೇಕೆಂದು ಸಿ. ಐ. ಟಿ. ಯು ಕರೆ ಕೊಟ್ಟಿದ್ದು, ಅದರ ಅಂಗವಾಗಿ ತಾ. 22—5—1986 ರಂದು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ನಿರುದ್ಯೋಗಿಕಾರ್ಮಿಕರ ರಾಜ್ಯಮಟ್ಟದ ಸಮಾವೇಶ ನಡೆಯುತ್ತದೆ. ಸಿ. ಐ. ಟಿ ಯು ಅಧ್ಯಕ್ಷರಾದ ಬಿ. ಟಿ. ರಣದಿವೆಯವರು ಸಮಾವೇಶವನ್ನು ಉದ್ಘಾಟನೆ ಮಾಡುತ್ತಾರೆ ಸಹಸ್ರ ಸಂಖ್ಯೆಯಲ್ಲಿ ಬನ್ನಿ, ಸಮಾವೇಶವನ್ನು ಯಶಸ್ವಿಗೊಳಿಸಿ.

ಕಾಂಗ್ರೆಸ್ ಪಕ್ಷದಿಂದ ಮುಸ್ಲಿಂ ಮಹಿಳೆಯರಿಗೆ ದ್ರೋಹ

ಅಧಿಕಾರದ ಗದ್ದುಗೆ ಏರುವ ಆತುರದಿಂದ ಭಾರತವನ್ನು ವಿಭಜಿಸುವ ಬ್ರಿಟಿಷರ ಒಳಸಂಚಿಗೆ ಕಾಂಗ್ರೆಸ್ಸು ಬಲಿ ಬಿದ್ದಿತ್ತು 1947, ಆಗಸ್ಟ್ 15 ರಂದು. ಈಗ ತನ್ನ ಬಂಡವಾಳಶಾಹಿ ಭೂಮಾಲಕ ವರ್ಗದ ಹಿಡಿತವನ್ನು ಭದ್ರಗೊಳಿಸುವ ಸಲುವಾಗಿ ಮುಸ್ಲಿಂ ಮತಗಳ ಬ್ಯಾಂಕನ್ನು ವಶಪಡಿಸಿಕೊಳ್ಳುವ ದುರುದ್ದೇಶದಿಂದ ಮುಸ್ಲಿಂ ಮತಾಂಧರ ಒತ್ತಡಕ್ಕೆ ಬಲಿಬಿದ್ದು "ಮುಸ್ಲಿಂ ಮಹಿಳೆಯರ (ವಿವಾಹ ವಿಚ್ಛೇದನ ಸಂಬಂಧ) ರಕ್ಷಣೆ ಮಸೂದೆಯನ್ನು" ತರಾತುರಿಯಾಗಿ ಲೋಕ ಸಭೆಯಲ್ಲಿ ಪಾಸು ಮಾಡಿ ರಾಜೀವ ಕಾಂಗ್ರೆಸ್ ದೇಶದಲ್ಲಿ ಈಗಾಗಲೇ ಪ್ರಸರಿಸಿರುವ ಜಾತೀಯ ಮತಾಂಧತೆಗೆ ಮತ್ತಷ್ಟು ವಿಷ ಚೆಲ್ಲಿದಂತಾಗಿದೆ.

ವಿರೋಧ ಪಕ್ಷಗಳ, ವಿಚಾರವಾದಿಗಳ, ಜಾತ್ಯಾತೀತ ಜನರ ಅಭಿಪ್ರಾಯಗಳನ್ನು ತನ್ನ ಪಕ್ಷದಲ್ಲಿಯೇ ಬಲವಾದ ವಿರೋಧವನ್ನೂ ಗಾಳಿಗೆ ತೂರಿ, ಮುಸ್ಲಿಂ ಮೂಲಭೂತವಾದಿಗಳನ್ನು ಜಾತೀಯ ಶಕ್ತಿಗಳನ್ನೂ ಒಲಿಸುವ ಸಲುವಾಗಿ ರಾಜೀವಗಾಂಧಿ ಮೇ 6 ರಂದು ಮಧ್ಯರಾತ್ರಿಯಲ್ಲಿ ಮುಸ್ಲಿಂ ಮಹಿಳೆಯರಿಗೆ ಅಪಮಾನವನ್ನುಂಟು ಮಾಡುವ, ಮುಸ್ಲಿಂ ವಿಧವೆಯರನ್ನೆಲ್ಲ ನಿರ್ಗತಿಕರನ್ನಾಗಿಸುವ ವಿಧೇಯಕವನ್ನು ಲೋಕ ಸಭೆಯಲ್ಲಿ ಮಂಜೂರು ಮಾಡಿದ್ದಾರೆ. ಸಿ.ಪಿ.ಐ (ಎಂ)ನ ಲೋಕ ಸಭೆ ಸದಸ್ಯರಾದ ಸೈಫುದ್ದೀನ್ ಚೌದರಿಯವರು ಹೇಳಿದಂತೆ "ಈ ಮಸೂದೆಯನ್ನು ಸ್ವೀಕಾರ ಮಾಡುವುದೆಂದರೆ ಜಾತ್ಯಾತೀತತೆಯನ್ನೂ, ನಾಗರೀಕತೆಯನ್ನೂ, ಮಹಿಳೆಯರ ಮರ್ಯಾದೆಯನ್ನೂ ಕೊಲೆ ಮಾಡಿದಂತೆಯೇ ಸರಿ. ಇದು ಕರಿ ವಿಧೇಯಕ". ತೆಲುಗು ದೇಶಂನ ಎಂ. ಪಿ. ದೋರಾ ಹೇಳಿದಂತೆ "ಇದು ಮಸೂದೆಯಲ್ಲ; ಮುಸ್ಲಿಂ ಮಹಿಳೆಯರನ್ನೂ ಮಕ್ಕಳನ್ನೂ ತುಳಿಯುವ ಕಾಡುಕೋಣ". ಅಸ್ಸಾಂ ಗಣತಂತ್ರ ಪರಿಷತ್ತಿನ ಸದಸ್ಯ ಸೈಫುದ್ದೀನ್ ಅಹಮದ್ ಅವರು ಈ ಮಸೂದೆ ಮುಸ್ಲಿಂ ಜನಾಂಗವನ್ನು

ಎನ್. ಕೆ. ಉಪಾಧ್ಯಾಯ

ರಾಷ್ಟ್ರೀಯ ಪ್ರವಾಹದಿಂದ ಬೇರೆಡೆ ಒಯ್ಯುತ್ತದೆಂದು ಪ್ರತಿಕ್ರಿಯೆ ವ್ಯಕ್ತ ಮಾಡಿ, ಮುಸ್ಲಿಂ ಮಹಿಳೆಯರಿಗೂ ಕಾನೂನಿನ ಕಕ್ಷೆಯಲ್ಲಿ ಸಮಾನ ಹಕ್ಕು ಸಿಗುವಂತಾಗಬೇಕೆಂದೂ ಈ ಮಸೂದೆ ಶ್ರೀಮಂತ ಮುಸ್ಲಿಂ ಮಹಿಳೆಯರಿಗಷ್ಟೇ ಲಾಭದಾಯಕವಾಗಿದ್ದು, ಇದು ಬೇಡುವವರ ಹೊಸ ವರ್ಗವನ್ನೇ ನಿರ್ಮಾಣ ಮಾಡುತ್ತದೆಂದು ಹೇಳಿದ್ದಾರೆ. ಈ ಮಸೂದೆಯನ್ನು ಪ್ರತಿಭಟಿಸಿ ಮಂತ್ರಿ ಸ್ಥಾನಕ್ಕೆ ರಾಜೀನಾಮೆಯಿತ್ತ ಕಾಂಗ್ರೆಸ್‌ನ ಆರೀಫ್ ಅಹಮದ್ ಖಾನ್ ಅವರು ಮುಸ್ಲಿಂ ಮಹಿಳೆಯರೆಂದರೆ ಗುಲಾಮರು, ಪ್ರಾಣಿಗಳು, ಪಶುಗಳು, ಖಾಸಗಿ ಆಸ್ತಿಯೆಂದು ಪರಿಗಣಿಸಲ್ಪಡುತ್ತಿದ್ದ ಇಸ್ಲಾಂ ಯುಗದ ಪೂರ್ವ ಕಾಲಕ್ಕೆ ತಳ್ಳುತ್ತದೆ ಈ ಮಸೂದೆ ಎಂದು ಆರೋಪಿಸಿದ್ದಾರೆ.

ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಕೃಷ್ಣ ಅಯ್ಯರ್ ಅವರು ಸಮಾನಾಂತರ ಮಸೂದೆ ತರುತ್ತೇವೆಂದು 1950ರಲ್ಲೇ ಸಂವಿಧಾನ ತಯಾರಕರು ಸಾರಿದ್ದರೂ ಕೂಡ ಪ್ರಧಾನ ಮಂತ್ರಿಯವರು ಮೂಲಭೂತವಾದಿಗಳ ಒತ್ತಡಕ್ಕೆ ಬಲಿ ಬಿದ್ದು ಈ ಮಸೂದೆಯನ್ನು ಮಂಡಿಸಿ ತಮ್ಮ ಪಕ್ಷದವರ ಮೇಲೆ "ಹುಕುಂ" ಜ್ಯಾರಿ ಮಾಡಿ ಅದನ್ನು ಲೋಕ ಸಭೆ ಒಪ್ಪುವಂತೆ ಮಾಡಿ ದೇಶದಲ್ಲಿ ಇನ್ನೂ ಹೆಚ್ಚು ವಿಷ ಚೆಲ್ಲಿ, ಜಾತೀಯ ದ್ವೇಷ ಬೆಳೆಯುವಂತೆ ಮಾಡಿರುವುದು ಅತ್ಯಂತ ಖಂಡನೀಯವೆಂದೂ ವಿಚಾರವಾದಿಗಳೂ, ಜಾತ್ಯಾತೀತತೆಯನ್ನು ಎತ್ತಿ ಹಿಡಿಯುವವರೆಲ್ಲ ತಮ್ಮೆಲ್ಲ ಶಕ್ತಿಯಿಂದ ಇದನ್ನು ವಿರೋಧಿಸಬೇಕೆಂದು ಕರೆ ನೀಡಿದ್ದಾರೆ. ಶ್ರೇಷ್ಠ ಸಿನೆಮಾ ನಟಿ ಶಬನಾ ಅಜ್ಮಿ ಕೂಡ ಶಹಾಬಾನು ಖಟ್ಲೆಯಲ್ಲಿ ಸುಪ್ರೀಂ ಕೋರ್ಟಿನ ನಿರ್ಣಯವನ್ನು ಎತ್ತಿ ಹಿಡಿದು ಲೋಕ ಸಭೆಯಲ್ಲಿ ಮಂಜೂರಾದ ಮಸೂದೆ ಇಸ್ಲಾಂ ಧರ್ಮಕ್ಕೂ - ಶರಿಯತ್ತಿಗೂ ವಿರುದ್ಧವಾಗಿದೆ. ಅದರಿಂದ ಮುಸ್ಲಿಂ ಮಹಿಳೆಯರಿಗೆ ಅನ್ಯಾಯವಾಗಿದೆಂದು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ಈ ಮಸೂದೆಯನ್ನು ಲೋಕ ಸಭೆಯಲ್ಲಿ ಮಂಡಿಸಿದ ಕೂಡಲೇ ಅಖಿಲ ಭಾರತ ಪ್ರಜಾಪ್ರಭುತ್ವ ಮಹಿಳಾ ಸಂಘಟನೆಯ ಮತ್ತು ಭಾರತ ಮಹಿಳೆಯರ ಪ್ರಜಾಪ್ರಭುತ್ವ ಒಕ್ಕೂಟಗಳ ಸಾವಿರಾರು ಮುಸ್ಲಿಂ ಮಹಿಳೆಯರು ತಮ್ಮ ಕೈಗಳನ್ನು ಕಬ್ಬಿಣದ ಸಂಕೋಲೆಯಿಂದ ಗೇಟಿಗೆ ಕಟ್ಟಿಕೊಂಡು ಲೋಕ ಸಭೆಯ ಮುಖ್ಯ ಬಾಗಿಲಿನೆದುರು ಪಿಕೆಟಿಂಗ್ ಮಾಡಿ ಸದಸ್ಯರನ್ನೂ, ಅಧಿಕಾರಿಗಳನ್ನೂ ನೌಕರರನ್ನೂ ಒಳಗೆ ಬಿಡಲು ನಿರಾಕರಿಸಿದರು. ಕಬ್ಬಿಣದ ಸಂಕೋಲೆಯಿಂದ ಕೈ ಕಟ್ಟಿಕೊಂಡ ಮಹಿಳೆಯರನ್ನು ಚದುರಿಸಲು ಸಾಧ್ಯವಾಗದೆ, ಕೊನೆಯಲ್ಲಿ ಕಬ್ಬಿಣದ ಸಂಕೋಲೆಯನ್ನೇ ಕತ್ತರಿಸಿ ಪಾಕಿ ಮಹಿಳೆಯರನ್ನೆಲ್ಲ ಬಂಧಿಸಬೇಕಾಯಿತು. ಹಲವಾರು ಮುಸ್ಲಿಂ ಸಂಘಟನೆಗಳೂ ಶಹಾಬಾನೂ ಪರ ತೀರ್ಪನ್ನು ಸ್ವಾಗತಿಸಿ, ಜಾತಿಯವಾದಿಗಳಿಗೆ ಶರಣಾಗತವಾಗುವ ಮಸೂದೆಯನ್ನು ಖಂಡಿಸಿದ್ದಾರೆ. ಬೆಂಗಳೂರಿನಲ್ಲಿ ಕೂಡ ಸಿಐಟಿಯು ಮತ್ತು ಪ್ರಗತಿಪರ ಮುಸ್ಲಿಂ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ನೂರಾರು ಮುಸ್ಲಿಂ ಮಹಿಳೆಯರು ಮೆರವಣಿಗೆಯಲ್ಲಿ ರಾಜಭವನಕ್ಕೆ ತೆರಳಿ ಮಸೂದೆಯನ್ನು ಖಂಡಿಸುವ ಮನವಿಯನ್ನು ರಾಜ್ಯಪಾಲರಿಗೆ ಅರ್ಪಿಸಿದ್ದರು. ಮತದಾನದ ಸ್ವಾತಂತ್ರ್ಯ ಕೊಟ್ಟಿದ್ದರೆ ನೂರಾರು ಕಾಂಗ್ರೆಸ್ ಸದಸ್ಯರು ಕೂಡ ಈ ಮಸೂದೆಯ ವಿರುದ್ಧ ಮತದಾನ ಮಾಡುತ್ತಿದ್ದರು. ಈ ವಿಷಯ ತಿಳಿದೇ ಮಸೂದೆಯ ಪರವಾಗಿ ಪ್ರತಿಯೊಬ್ಬನೂ ಮತ ನೀಡಲೇಬೇಕೆಂಬ

(8ನೇ ಪುಟ ನೋಡಿ)

'ಸಾರ್ವಜನಿಕ ಕ್ಷೇತ್ರವನ್ನು ಉಳಿಸಿ' - ವಿಚಾರ ಗೋಷ್ಠಿ

"ಸಾರ್ವಜನಿಕ ಕ್ಷೇತ್ರವನ್ನು ಉಳಿಸಿರಿ" ಎಂಬ ವಿಷಯದ ಮೇಲೆ ತಾ. 21-5-86 ರಂದು ಬೆಂಗಳೂರಿನ ಟೌನ್ ಹಾಲ್‌ನಲ್ಲಿ ಸಂಜೆ 4 ಗಂಟೆಗೆ ವಿಚಾರ ಸಂಕಿರಣ ಇರುತ್ತದೆ. ಸಿ. ಐ. ಟಿ. ಯು ಅಧ್ಯಕ್ಷರಾದ ಬಿ. ಟಿ. ರಣದಿವೆಯವರು ಉದ್ಘಾಟನೆ ಮಾಡುತ್ತಾರೆ.

ಸರ್ವರಿಗೂ ಸ್ವಾಗತ.

ಸಾರ್ವಜನಿಕ ಕ್ಷೇತ್ರದ ವಿರುದ್ಧ ಒಳಸಂಚು

—ಎಸ್. ಸೂರ್ಯನಾರಾಯಣರಾವ್

ನಮ್ಮ ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಸಾರ್ವಜನಿಕ ಕ್ಷೇತ್ರ ಅತ್ಯಂತ ಮಹತ್ವದ ಪಾತ್ರವೆನಿಸಿದೆ. ಆ ಕ್ಷೇತ್ರವನ್ನುಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯವೆಂದು ರಾಜ್ಯ ಸಿ ಐ. ಟಿ. ಯು ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್ ಅವರು ಇತ್ತೀಚಿಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ತಾ. 21-5-86 ರಂದು ಸಿ. ಐ. ಟಿ. ಯು ಕರೆಯ ಮೇರೆಗೆ ರಾಜ್ಯಾದ್ಯಂತ ನಡೆಯುವ "ಸಾರ್ವಜನಿಕ ಕ್ಷೇತ್ರವನ್ನು ರಕ್ಷಿಸಿರಿ" ಬೇಡಿಕೆ ದಿನಾಚರಣೆಗನುಸಾರವಾಗಿ ಬೆಂಗಳೂರಿನಲ್ಲಿ ನಡೆಯಲಿರುವ ವಿಚಾರ ಗೋಷ್ಟಿಯ ಮಹತ್ವದ ಕುರಿತು ಪತ್ರಿಕಾ ಗೋಷ್ಟಿಯಲ್ಲಿ ವಿವರಿಸುತ್ತಿದ್ದರು.

ಇಂದು ರಾಜೀವ ಗಾಂಧಿಯವರ ಆರ್ಥಿಕ ನೀತಿಯಿಂದಾಗಿ ನಮ್ಮ ದೇಶದಲ್ಲಿ ಸಾರ್ವಜನಿಕ ಕೇತ್ರವನ್ನು ಕಡೆಗಣಿಸಲಾಗುತ್ತಿದೆ. ಖಂಡಿಸಲಾಗುತ್ತಿದೆ. ಉತ್ಪಾದನಾ ಖರ್ಚಿನಲ್ಲಿ ಕಡಿತ ಹಾಗೂ ನೈಪುಣ್ಯತೆಯ ಹೆಸರಿನಲ್ಲಿ ಸಾರ್ವಜನಿಕ ಕ್ಷೇತ್ರದ ಮಹತ್ವವನ್ನು ಹಿಂದೆ ತಳ್ಳಿ ಅದನ್ನು ಸಂಪೂರ್ಣವಾಗಿ ಕೈಬಿಡುವ ಪ್ರಯತ್ನ ನಡೆದಿದೆ. ಡಾ| ಅರ್ಜುನ್ ಸೇನ್‌ಗುಪ್ತಾ ಕಮಿಟಿಯ ಶಿಫಾರಸಿನ ಆಧಾರದಲ್ಲಿ ಸಾರ್ವಜನಿಕ ಕೈಗಾರಿಕೆಗಳನ್ನು ಕೈಬಿಡುವಂತೆ ಕಂಡು ಬರುತ್ತಿದೆ. ಮುಂದುವರಿದ ತಂತ್ರಜ್ಞಾನದ ಆಯಾತ, ತ್ವರಿತಗತಿಯಲ್ಲಿ ಕೈಗಾರಿಕಾಭಿವೃದ್ಧಿಯ ನೆಪದಲ್ಲಿ ಹೊಸ ಆರ್ಥಿಕ ನೀತಿಯನ್ನು ಪ್ರಕಟಿಸಲಾಗಿದೆ. ಆ ನೀತಿಯಂತೆ ನಿಯಂತ್ರಣಗಳನ್ನು ರದ್ದುಪಡಿಸಲಾಗುವುದು, ಖಾಸಗಿ ಕ್ಷೇತ್ರಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗುವುದು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ದೇಶದ ಮಾರ್ಕೇಟನ್ನು ತೆರೆದಿಡಲಾಗುವುದು. ಸಾರ್ವಜನಿಕ ಕ್ಷೇತ್ರ ಅಸಮರ್ಪಕವೆಂದು ಕೈಬಿಡಲಾಗುವುದು.

ಸಾರ್ವಜನಿಕ ಕ್ಷೇತ್ರದ ಮುಖ್ಯ ಸಮಸ್ಯೆ ಯಾವುದೆಂದರೆ ಆಡಳಿತಯಲ್ಲಿ ಬದಲಾವಣೆ ಮತ್ತು ಕೈಗಾರಿಕಾ ಘಟಕದ ಪುನರ್ರಚನೆ ಮಾತ್ರ ಎಂಬ ಅರ್ಥದಲ್ಲಿ ಅರ್ಜುನ್‌ಸೇನ್‌ಗುಪ್ತಾ ಕಮಿಟಿ ಶಿಫಾರಸು ಮಾಡಿದೆ. ನೌಕರಶಾಹಿ

(8ನೇ ಪುಟ ನೋಡಿ)

ನಿರುದ್ಯೋಗವು ಬಂಡವಾಳಶಾಹಿ ಸಮಾಜದ ಮೃತ್ಯುಪಾಶ

ಎಸ್. ಆರ್. ಆರಾಧ್ಯ

ನಿರುದ್ಯೋಗವು ವಿಶ್ವವ್ಯಾಪಿಯಾದ ಸಮಸ್ಯೆಯಾಗಿದೆಯೆಂದು ದಿವಂಗತ ಶ್ರೀಮತಿ ಇಂದಿರಾ ಗಾಂಧಿಯವರೂ ಸೇರಿದಂತೆ ಆಳುವ ಪಕ್ಷದ ಧುರೀಣರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೆ ವಾಸ್ತವಾಂಶವೆಂದರೆ ಇದು ಬಂಡವಾಳಶಾಹಿ ಜಗತ್ತಿಗೆ ಮಾತ್ರಸೀಮಿತವಾಗಿದೆ. ಅಮೇರಿಕಾ, ಬ್ರಿಟನ್, ಫ್ರಾನ್ಸ್, ಇಟಲಿ, ಜಪಾನ್, ಪಶ್ಚಿಮ ಜರ್ಮನಿ ಮುಂತಾದ ಮುಂದುವರಿದ ರಾಷ್ಟ್ರಗಳಲ್ಲೂ ಕಳೆದ ವರ್ಷಾಂತ್ಯದ ವೇಳೆಗೆ ಮೂರು ಕೋಟಿಗೂ ಮೀರಿ ನಿರುದ್ಯೋಗಿಗಳಿರುವುದಾಗಿ ವರದಿಯಾಗಿದೆ. ಬಂಡವಾಳಶಾಹಿ ಜಗತ್ತಿನಲ್ಲಿ ದಿನೇ ದಿನೇ ಕೆಡುತ್ತಿರುವ ಆರ್ಥಿಕ ಬಿಕ್ಕಟ್ಟಿನಿಂದ. ಹಾಗಾಗಲು ಸಾಮ್ರಾಜ್ಯಶಾಹಿ ರಾಷ್ಟ್ರಗಳು ಮಿಲಟರಿ ಕೈಗಾರಿಕೆಯನ್ನು ಅವಲಂಬಿಸುತ್ತಿವೆ. ಸಾಮಾಜಿಕ ಭದ್ರತಾ ಕ್ರಮಗಳನ್ನು ಬದಿಗೊತ್ತಿ ಮಾರಕಾಸ್ತ್ರಗಳ ಉತ್ಪಾದನೆಗಾಗಿ ನೂರಾರುಕೋಟಿ ಡಾಲರುಗಳನ್ನು ಸುರಿಯಲಾಗುತ್ತಿದೆ. ವರ್ಷವೊಂದಕ್ಕೆ 300 ಶತಕೋಟಿ ಡಾಲರುಗಳಿಗೂ ಅಧಿಕ ಅಮೇರಿಕನ್ ಸಾಮ್ರಾಜ್ಯಶಾಹಿಯು ಅಣುಸಮರ, ಬಾಹ್ಯಾಕಾಶ ತಾರಾಸಮರಗಳ ಸಿದ್ಧತೆಯಲ್ಲಿ ತೊಡಗಿದ್ದು ಇಡೀ ಪ್ರಪಂಚವನ್ನು ಶೀತಲ ಯುದ್ಧದಲ್ಲಿ ಮುಳುಗಿಸಿದೆ. ಜಗತ್ತಿನ ಮೇಲೆ ತನ್ನ ಅಧಿನಾಯಕತ್ವವನ್ನು ಸ್ಥಾಪಿಸಲು ಹವಣಿಸುತ್ತಿರುವ ಅಮೇರಿಕಾವು ವಿಶ್ವವನ್ನು ವಿನಾಶದಂಚಿನತ್ತ ಕೊಂಡೊಯ್ಯುತ್ತಿದೆ.

ಸಮಾಜವಾದಿ ಜಗತ್ತು

ಬಂಡವಾಳಶಾಹಿ ವ್ಯವಸ್ಥೆಯಿಂದ ಸಮಾಜವಾದಿ ಪರಿವರ್ತನೆಯ ಯುಗದಲ್ಲಿರುವ ಜಗತ್ತಿನ ಮೂರನೆಯ ಒಂದು ಭಾಗ ಇಂದು ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತವಾಗಿದೆ. ಸೋವಿಯತ್ ಒಕ್ಕೂಟ ಮಾತ್ರವಲ್ಲದೆ ಚೀನಾ, ಪೂರ್ವಜರ್ಮನಿ ಕ್ಯೂಬಾ, ಕೊರಿಯಾ, ವಿಯಟ್ನಾಂ ಮುಂತಾದ ಸಮಾಜವಾದಿ ರಾಷ್ಟ್ರಗಳಲ್ಲಿ ಅನಕ್ಷರತೆ, ಬಡತನ, ನಿರುದ್ಯೋಗದಂತಹ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗಿದೆ: ಉದ್ಯೋಗದ ಹಕ್ಕನ್ನು ಸಂವಿಧಾನದ ಮೂಲಭೂತ ಹಕ್ಕನ್ನಾಗಿ ಖಾತರಿಪಡಿಸಲಾಗಿದೆ. ಶಿಬಿರದ ಸಾಮ್ರಾಜ್ಯಶಾಹಿ ಕಿರುಕುಳ, ರಕ್ಷಣಾವೆಚ್ಚ ಒತ್ತಡವಿದ್ದಾಗ್ಯೂ ಸಮಾಜವಾದಿ ಜಗತ್ತು ಅಲ್ಪಾವಧಿಯಲ್ಲೇ ಅದ್ಭುತ ಪ್ರಗತಿಯನ್ನು ಸಾಧಿಸಿದೆ. ಅಮೇರಿಕಾ ಮತ್ತು ನ್ಯಾಟೋ ಮಿಲಿಟರಿ ಕೂಟದ ಆಕ್ರಮಣಕಾರಿ ನೀತಿಯನ್ನು ಸರ್ವವಿಧದಲ್ಲೂ ಪ್ರತಿರೋಧಿಸಲು ಶಕ್ತವಾಗಿರು ಸೋವಿಯತ್ ಒಕ್ಕೂಟಮತ್ತು ಸಮಾಜವಾದಿ ರಾಷ್ಟ್ರಗಳು ಜಾಗತಿಕ ಶಾಂತಿ ಚಳುವಳಿಯ ಮುಂಚೂಣಿಯಲ್ಲಿವೆ.

ಅವನತಿಯ ಮಾರ್ಗ

ಕಳೆದ ನಲವತ್ತು ವರ್ಷಗಳಿಂದ ಭಾರತ ಸರ್ಕಾರವು ಅನುಸರಿಸಿಕೊಂಡು ಬರುತ್ತಿರುವ ದಿವಾಳಿಕೋರ ಬಂಡವಾಳ ಶಾಹಿ ಪಥದಿಂದಾಗಿ ದೇಶವು ಇಂದು ಹಿಂದೆಂದಿಗಿಂತಲೂ ತೀವ್ರವಾದ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಪಂಚವಾರ್ಷಿಕ ಯೋಜನೆಗಳ ಮೂಲಕ ಸರ್ಕಾರವು ದೇಶದ ಸಮಸ್ತ ಶಕ್ತಿಯನ್ನೂ ಅವನತಿಯಲ್ಲಿರುವ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ರಕ್ಷಣೆಗಾಗಿ ಧಾರೆಯೆರೆಯುತ್ತಿದೆ. ಶಾಶ್ವತವಾದ ಬಿಕ್ಕಟ್ಟಿನಲ್ಲಿ ಮುಳುಗಿರುವ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯನ್ನು ಅವಲಂಬಿಸಿರುವ ಭಾರತದ ಆರ್ಥಿಕತೆಯುಕುಸಿಯುತ್ತಿದೆ. ಹಣದುಬ್ಬರ, ಕರಭಾರ, ಬೆಲೆಏರಿಕೆಯು ವಿಪರೀತವಾಗಿದ್ದು 1955 ಕ್ಕೆ ಹೋಲಿಸಿದರೆ ಗ್ರಾಹಕರ ಬೆಲೆ ಸೂಚ್ಯಂಕದ ಪ್ರಕಾರ ಒಂದು ರೂಪಾಯಿಯ ಮೌಲ್ಯವು 12 ಪೈಸೆಗಿಳಿದಿದೆ. ಜನಸಾಮಾನ್ಯರ ಜೀವನ ಸ್ಥಿತಿಯು ಅಧೋಗತಿಗಿಳಿಯುತ್ತಿದೆ.

ಪಾರ್ಶ್ವವಾಯು ಬಡಿತ

ನಿರುದ್ಯೋಗವು ಬೃಹದಾಕಾರವಾಗಿಬೆಳೆಯುತ್ತಿದ್ದು ಉದ್ಯೋಗ ವಿನಿಮಯ ಕಚೇರಿಗಳಲ್ಲಿ ನೊಂದಾಯಿತರಾದವರ ಸಂಖ್ಯೆ 3 ಕೋಟಿಯನ್ನು ತಲುಪಿದೆ. ನೊಂದಾವಣೆಯಾಗದರುವ ಸಂಖ್ಯೆಯು ಇನ್ನೂ ಹೆಚ್ಚಾಗಿದೆ. ಯೋಜನೆಯಿಂದ ಯೋಜನೆಗೆ ನಿರುದ್ಯೋಗಿಗಳ ಸಂಖ್ಯೆಯು ಮಿತಿಮೀರಿಏರಿದ್ದ ನಗರದ ಕಾರ್ಮಿಕ ವರ್ಗ ಮತ್ತು ಮಧ್ಯಮ ವರ್ಗದ ನಿಜ ಆದಾಯವು ಕೆಳಗಿಳಿಯುತ್ತಿದೆ. ಜನರ ಕೊಳ್ಳುವ ಶಕ್ತಿಯು ಕಡಿಮೆಯಾಗುತ್ತಿದ್ದು ಕೈಗಾರಿಕಾ ಬೆಳವಣಿಗೆಯು ಯೋಜನೆಯ ಗುರಿ ಮುಟ್ಟುತ್ತಿಲ್ಲ. ಬದಲಾಗಿ ಪ್ರತಿವರ್ಷವೂ ಅನೇಕ ಕೈಗಾರಿಕೆಗಳು ರೋಗಗ್ರಸ್ತವಾಗುತ್ತಿವೆ. ಹತ್ತಿ ಬಟ್ಟೆಗಿರಣಿ. ಸೆಣಬು, ಸಕ್ಕರೆ, ಇಂಜಿನಿಯರಿಂಗ್, ಉಕ್ಕು, ಕಬ್ಬಿಣ, ರಾಸಾಯನಿಕ ಮುಂತಾದ ಮುಖ್ಯ ಕೈಗಾರಿಕೆಗಳು ರೋಗಪೀಡಿತವಾಗಿದ್ದು ಸುಮಾರು ಒಂದು ದಶಲಕ್ಷದಷ್ಟು ದೊಡ್ಡ, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಘಟಕಗಳು ಬಹುತೇಕ ಮುಚ್ಚುವ ಹಂತದಲ್ಲಿವೆ. ಇದರಿಂದಾಗಿ ಭಾರತದ ಆರ್ಥಿಕತೆಗೆ ಪಾರ್ಶ್ವವಾಯು ಬಡಿದಿದ್ದು ಲಕ್ಷಾಂತರ ಕಾರ್ಮಿಕರು ಖಾಯಂಆಗಿ ನಿರುದ್ಯೋಗಿಗಳ ಸೈನ್ಯವನ್ನು ಸೇರಿದಂತಾಗಿದೆ.

ಗ್ರಾಮೀಣ ನಿರುದ್ಯೋಗ

ಗ್ರಾಮೀಣ ಪ್ರದೇಶದಲ್ಲಿಕೃಷಿಕೂಲಿಗಾರರಿಗೆ ಕನಿಷ್ಟ ಕೂಲಿಯೂ ಲಭ್ಯವಿಲ್ಲ ವರ್ಷವಿಡೀ ಕೆಲಸವೂ ಸಿಗುವುದಿಲ್ಲ. ರೈತಾಪಿ ಜನರು ಕೃಷಿ ಉತ್ಪನ್ನಗಳಿಗೆ ಲಾಭದಾಯಕವಾದ ಬೆಲೆಯಿಲ್ಲದೆ ದಿವಾಳಿಯಾಗುತ್ತಿದ್ದಾರೆ. ವಿದ್ಯುಚ್ಛಕ್ತಿ ನೀರಿನ ಕರ, ಬೀಜ, ಗೊಬ್ಬರ, ಕ್ರಿಮಿನಾಶಕ, ಕೃಷಿ ಸಲಕರಣೆಗಳು ಹಾಗೂ ದಿನಬಳಕೆ ವಸ್ತುಗಳ ಬೆಲೆಗಳು ಸತತವಾಗಿ ಏರುತ್ತಿವೆ. ಗ್ರಾಮೀಣ ಸಾಲ ಕಳೆದ ವರ್ಷಾಂತ್ಯದಲ್ಲಿ ರೂ 13,000 ಕೋಟಿಗೂ ಮೀರಿದೆ. ಗ್ರಾಮೀಣ ನಿರುದ್ಯೋಗಿಗಳ ಸಂಖ್ಯೆಯು 4ಕೋಟಿಯನ್ನು ದಾಟಿದೆ. ತೆಂಗಿನನಾರು, ಗೇರುಬೀಜ, ಕೈಮಗ್ಗ ರೇಷ್ಮೆ, ಮೀನುಗಾರಿಕೆ, ಶೇಂದಿ ಇಳಿಸುವುದುಮುಂತಾದ ಸಾಂಪ್ರದಾಯಿಕ ಕೈಗಾರಿಕೆಗಳು ಬಂಡವಾಳಶಾಹಿ ಪೈಪೋಟಿಯನ್ನು ಎದುರಿಸಬೇಕಾಗಿ ಅವುಗಳಲ್ಲಿ ದುಡಿಯುತ್ತಿರುವ ಲಕ್ಷಾಂತರ ಮಂದಿ ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಒಕ್ಕಲೆಬ್ಬಿಸಲ್ಪಟ್ಟ ರೈತರು, ಕೃಷಿ ಕೂಲಿಗಾರರು, ನಾಶವಾದ ಕುಶಲಕರ್ಮಿಗಳು ನಿರುದ್ಯೋಗಿಗಳ ಪಡೆಯನ್ನು ಸೇರಿಕೊಳ್ಳುತ್ತಿದ್ದಾರೆ. ಬರ, ನೆರೆ ಮುಂತಾದ ಪ್ರಕೃತಿ ವಿಕೋಪಗಳಿಂದ ರಕ್ಷಣೆಯಿಲ್ಲದೆ ಅವುಗಳಿಗೆ ಬಲಿಯಾಗುತ್ತಾರೆ. ಸರ್ಕಾರದ ಭೂಸುಧಾರಣೆಯ ನಾಟಕ, ಬಡತನ ನಿರ್ಮೂಲನಾ ಕಾರ್ಯಕ್ರಮ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಇತ್ಯಾದಿಗಳು ಕೇವಲ ಪ್ರಚಾರದ ಅಸ್ತ್ರಗಳಾಗಿವೆ. ಹರಿಜನ-ಗಿರಿಜನರು ಜೀತದಾಳುಗಳಾಗಿ ಆದಿವಾಸಿಗಳು ಗುಲಾಮರಾಗಿ ಮಾರಲ್ಪಡುತ್ತಿದ್ದಾರೆ. ನಿರ್ಗತಿಕರು ಪೇಟೆ ಪಟ್ಟಣಗಳಿಗೆ ವಲಸೆ ಬಂದು ಉದ್ಯೋಗ ಮಾರುಕಟ್ಟೆಯಲ್ಲಿ ಕೂಲಿಯ ದರವು ಮತ್ತಷ್ಟು ಇಳಿಯುತ್ತಿದೆ.

ನೂತನ ಆರ್ಥಿಕ ನೀತಿ

ರಾಜೀವ್ ಗಾಂಧಿಯವರ ನೂತನ ಆರ್ಥಿಕ ನೀತಿಯು ದೇಶವನ್ನು ಮತ್ತಷ್ಟು ದಿವಾಳಿಯತ್ತ ಕೊಂಡೊಯ್ಯುವುದರಲ್ಲಿ ಸಂದೇಹವಿಲ್ಲ. ಸಮಾಜವಾದಿ ಮಾದರಿಯ ಸಮಾಜ ನಿರ್ಮಾಣದ ಹೆಸರಿನಲ್ಲಿ ಕಾಂಗ್ರೆಸ್ ಆಳ್ವಿಕೆಯಲ್ಲಿ ಗುತ್ತೇದಾರಿ ಬಂಡವಾಳವು ಭೂತಾಕಾರವಾಗಿ ಬೆಳೆಯುತ್ತಿದೆ. ಸ್ವಾತಂತ್ರ್ಯ ದೊರೆತ ಸಮಯದಲ್ಲಿ ಕೇವಲ 50 ಕೋಟಿ ರೂಗಳಷ್ಟು ಬಂಡವಾಳ ಹೊಂದಿದ್ದ ಟಾಟಾ, ಬಿರ್ಲಾ, ಇಂದು ತಲಾ 3500 ಕೋಟಿ ರೂ.ಗಿಂತಲೂ ಹೆಚ್ಚು ಅಧಿಕ ಸಂಪತ್ತಿನ ಒಡೆಯರಾಗಿದ್ದಾರೆ. ಕೆಲವೇ ಗುತ್ತೇದಾರಿ ಮನೆತನಗಳುಭಾರತದ ಆರ್ಥಿಕತೆಯನ್ನು ನಿಯಂತ್ರಿಸುತ್ತಿದ್ದು ಕಪ್ಪುಹಣವು ಸಮಾನಾಂತರ ಆರ್ಥಿಕ ವ್ಯವಸ್ಥೆಯನ್ನು ಸೃಷ್ಟಿಸಿದೆ. ರಾಜೀವ್ ನೀತಿಯು ಅಂತರಿಕವಾಗಿ ಗುತ್ತೇದಾರಿ ಮತ್ತು ಖಾಸಗಿ ಬಂಡವಾಳವನ್ನು ಪ್ರೋತ್ಸಾಹಿಸಿ ಸಾರ್ವಜನಿಕ ರಂಗವನ್ನು ಸಂಪೂರ್ಣವಾಗಿ ಕಡೆಗಣಿಸುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶದ ಹೆಬ್ಬಾಗಿಲನ್ನು ಮುಕ್ತವಾಗಿ ತೆರೆಯಲಾಗಿದೆ. ಶೇ 60 ರಷ್ಟು ಭಾರತೀಯರ ಬಡತನದ ರೇಖೆಗಿಂತ ಕೆಳಗೆ ಜೀವಿಸುತ್ತಿದ್ದು ಸುಮಾರು 10 ಕೋಟಿ ಮಂದಿ ನಿರುದ್ಯೋಗದ ಬವಣೆಯಲ್ಲಿ ನರಳುತ್ತಿರುವಾಗ ದೇಶವನ್ನು 21 ನೇ ಶತಮಾನಕ್ಕೆ ಕೊಂಡೊಯ್ಯುವ ಆಧುನೀಕರಣ ಯೋಜನೆಯು ವಿನಾಶಕಾರಿಯಾಗಿದೆ. ಸ್ವಯಂಚಾಲೀಕರಣ, ಕಂಪ್ಯೂಟರೀಕರಣದಂತಹ ಮೂರ್ಖ ಕ್ರಮಗಳು ಉದ್ಯೋಗಾವಕಾಶಗಳನ್ನು ಬಳಿಸಿ ಭವಿಷ್ಯದ ಪೀಳಿಗೆಯನ್ನು ಶಾಶ್ವತವಾಗಿ ನಿರುದ್ಯೋಗದ ಕೂಪಕ್ಕೆ ತಳ್ಳುತ್ತದೆ. ಈಗಾಗಲೇ ಕಾರ್ಖಾನೆಗಳ ಮುಚ್ಚುವಿಕೆ, ಬೀಗಮುದ್ರೆ, ಲೇಆಫ", ರಿಟ್ರೆಂಚ್‌ಮೆಂಟ್‌ಗಳಿಂದ ಲಕ್ಷಾಂತರ ಕಾರ್ಮಿಕರು ಬೀದಿಪಾಲಾಗಿರುವಾಗ ಆಧುನೀಕರಣದ ಆಕರ್ಷಕ ನೀತಿಯುಮತ್ತಷ್ಟು ಉದ್ಯೋಗಿಗಳನ್ನು ಹೊರದೂಡುತ್ತದೆ. ಸಾಮಾಜಿಕ ಉದ್ದಿಮೆಗಳು ಮತ್ತು ಸರ್ಕಾರಿ ಇಲಾಖೆಗಳಲ್ಲಿ ಹೊಸ ನೇಮಕಾತಿಯನ್ನು ನಿಷೇಧಿಸಲಾಗಿದೆ.

ದುಡಿಯುವ ಹಕ್ಕು

ದುಡಿಯುವ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಸೇರ್ಪಡೆಗಾಗಿ, ನಿರುದ್ಯೋಗ ಭತ್ಯೆ ಯೋಜನೆಯ ಜಾರಿಗಾಗಿ ಮತ್ತು ನೇಮಕಾತಿಯಲ್ಲಿನ ಭ್ರಷ್ಟಾಚಾರ-ಸ್ವಜನ ಪಕ್ಷಪಾತಗಳ ವಿರುದ್ಧ ಹೋರಾಡಬೇಕಾಗಿದೆ. ಕರ್ನಾಟಕದಲ್ಲಿನ ಜನತಾ ಸರಕಾರದ ಕುಟುಂಬಕ್ಕೊಂದು ಉದ್ಯೋಗದ ಮಾತು ಭರವಸೆಯಾಗಿಯೇ ಉಳಿದಿದೆ. ಖಾಲಿಯಿರುವ ಸಾವಿರಾರು ಹುದ್ದೆಗಳನ್ನು ಭರ್ತಿಮಾಡಲು ಮತ್ತು ಸರ್ಕಾರಿ ಇಲಾಖೆಗಳಲ್ಲಿನ ದಿನಗೂಲಿ ಕೆಲಸಗಾರರನ್ನು ಖಾಯಂಗೊಳಿಸಲು ಸರ್ಕಾರವು ಸಿದ್ಧವಾಗಿಲ್ಲ. ಕಾರ್ಮಿಕ ವಿವಾದಗಳನ್ನು ಶೀಘ್ರವಾಗಿ ನ್ಯಾಯಯುತವಾಗಿ ಇತ್ಯರ್ಥ ಮಾಡಲಾಗುತ್ತಿಲ್ಲ. ರೋಗಗ್ರಸ್ಥ ಈಕೈಗಾರಿಕೆಗಳನ್ನು ಸರ್ಕಾರವೇ ವಹಿಸಿಕೊಂಡು ಲಕ್ಷಾಂತರ ಕಾರ್ಮಿಕರಿಗೆ ಉದ್ಯೋಗದ ಭದ್ರತೆ ನೀಡಲು ಮತ್ತು ರಾಜ್ಯದ ಅಭಿವೃದ್ಧಿ ಯೋಜನೆಗಳ ಜಾರಿಗಾಗಿ ಒತ್ತಾಯಿಸಬೇಕಾಗಿದೆ. ರಾಜ್ಯದ ಸಹಸ್ರಾರು ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ವಿಜಯನಗರದ ಉಕ್ಕು ಕಾರ್ಖಾನೆ, ಮಂಗಳೂರು ತೈಲಾಗಾರ, ಮೈಸೂರು ಡಿಸೇಲ್ ಇಂಜಿನ್ ಕಾರ್ಖಾನೆ, ರೈಲ್ವೆ ಮಾರ್ಗ ಅಭಿವೃದ್ಧಿ ಮುಂತಾದ ಯೋಜನೆಗಳು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿಯೂ ಕೇಂದ್ರ ಸರ್ಕಾರದ ನಿರ್ಲಕ್ಷ್ಯಕ್ಕೊಳಗಾಗಿವೆ. ಅವುಗಳ ಸ್ಥಾಪನೆಗಾಗಿ ಹೋರಾಡಬೇಕಾಗಿದೆ.

ಸಮಗ್ರತೆಗೆ ಸಂಚಕಾರ

ಕೋಟ್ಯಾಂತರ ಭಾರತೀಯ ಯುವಕ-ಯುವತಿಯರ ಬಾಳು ಬರಡಾಗಿದೆ. ನಿರುದ್ಯೋಗದ ಪೆಡಂಭೂತವು ಆತ್ಮಹತ್ಯೆ, ವರದಕ್ಷಿಣೆ, ವ್ಯಭಿಚಾರದಂತಹ ಸಾಮಾಜಿಕ ಪಿಡುಗುಗಳನ್ನು ಉಲ್ಬಣಗೊಳಿಸುತ್ತಿದೆ. ದೇಶದ ಪ್ರಗತಿಗೆ ಉಪಯುಕ್ತವಾಗಬೇಕಾಗಿದ್ದ ಯುವಜನರ ಸೃಜನಾತ್ಮಕ ಶಕ್ತಿಯು ವ್ಯರ್ಥವಾಗುತ್ತದೆ. ರಾಷ್ಟ್ರದ ಸಮಗ್ರತೆಗೆ ಕಂಟಕಪ್ರಾಯವಾಗಿರುವ ಪ್ರತಿಗಾಮಿ ಶಕ್ತಿಗಳು ಜಾತಿ, ಭಾಷೆ, ಪ್ರಾದೇಶಿಕ ಸಂಕುಚಿತ ಭಾವನೆಗಳನ್ನು ಪ್ರಚೋದಿಸಿ ಯುವಜನಾಂಗವನ್ನು ಸಮಾಜಘಾತುಕ ಕೃತ್ಯಗಳಿಗೆ ಬಳಸಿಕೊಳ್ಳುತ್ತಿವೆ. ಜನರಲ್ಲಿನ ತೀವ್ರ ಅತೃಪ್ತಿಯ ಲಾಭ ಪಡೆದು ಅಸ್ಸಾ-ಖಲಿಸ್ತಾನ್‌ನಂತಹ ಪ್ರತ್ಯೇಕತಾದಿ ಚಳುವಳಿಗಳನ್ನು, ಹಿಂದೂ-ಮುಸ್ಲಿಂ ಕೋಮು ಘರ್ಷಣೆಗಳನ್ನು ಪ್ರಚೋದಿಸಲಾಗುತ್ತಿದೆ. ಗುಜರಾತಿನಲ್ಲಿ ಮೀಸಲಾತಿ ಪರ - ವಿರೋಧ ಜಾತಿ ಕಲಹವನ್ನು ಪ್ರೋತ್ಸಾಹಿಸಲಾಗುತ್ತಿದೆ.

ಆಳುವ ವರ್ಗವು ಸಂಘಟಿತ ಕಾರ್ಮಿಕರ ವಿರುದ್ಧ ಅಸಂಘಟಿತರನ್ನು ಮತ್ತು ನಿರುದ್ಯೋಗಿಗಳನ್ನು ಹಾಗೂ ನಗರದ ಜನರ ವಿರುದ್ಧ ಗ್ರಾಮೀಣ ಜನರನ್ನು ಪರಸ್ಪರ ಎತ್ತಿ ಕಟ್ಟಿ ಜನತೆಯ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸುತ್ತಿದೆ.

ಪರಿಹಾರ ಮಾರ್ಗ

ಭಾರತದಲ್ಲಿ ಗುತ್ತೇದಾರಿ ನಾಯಕತ್ವದ ಬಂಡವಾಳಶಾಹಿ ಭೂಮಾಲೀಕ ವರ್ಗದ ಪ್ರಭುತ್ವವನ್ನು ಕಿತ್ತೊಗೆದು ಸಮಾಜವಾದದತ್ತ ಮುನ್ನಡೆಯುವುದೊಂದೇ ಪರಿಹಾರ ಮಾರ್ಗವಾಗಿದೆ. ಪ್ರಗತಿಪರ ಭೂ-ಸುಧಾರಣೆ ಮತ್ತು ಶೀಘ್ರ ಕೈಗಾರೀಕರಣದ ಮೂಲಕ ಮಾತ್ರ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಸಾಧ್ಯ. ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಂಡು ದುಡಿಯುವ ವರ್ಗದ ಮತ್ತು ಜನಸಾಮಾನ್ಯರ ಜೀವನ ಮಟ್ಟವನ್ನು ಸುಧಾರಿಸುವ ಮೂಲಕ ಭಾರತದ ವಿಶಾಲ ಮಾರುಕಟ್ಟೆಯನ್ನು ವಿಸ್ತರಿಸಿದರೆ ಕೈಗಾರಿಕಾ ಪ್ರಗತಿಯನ್ನು ತೀವ್ರಗೊಳಿಸಿ ಉದ್ಯೋಗವಕಾಶಗಳನ್ನು ಸೃಷ್ಟಿಸಬಹುದಾಗದೆ. ಈ ದಿಕ್ಕಿನಲ್ಲಿ ದೇಶದಲ್ಲಿನ ಎಡಶಕ್ತಿಗಳ ಐಕ್ಯತೆಯನ್ನು ಬಲಪಡಿಸಿ ಮತ್ತು ಜಾತ್ಯಾತೀತ ಶಕ್ತಿಗಳನ್ನು ಒಂದುಗೂಡಿಸಿ ಪರ್ಯಾಯ ಕಾರ್ಯಕ್ರಮದ ಆಧಾರದಲ್ಲಿ ಕಾಂಗ್ರೆಸ (ಐ) ಸರಕಾರದ ಜನವಿರೋಧಿ ನೀತಿಯ ವಿರುದ್ಧ ಹೋರಾಡಬೇಕಾಗಿದೆ.

ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ಎಡರಂಗ ಸರ್ಕಾರಗಳು ದೇಶದ ಪ್ರಜಾಪ್ರಭುತ್ವ ಚಳುವಳಿಯ ಮುಂಚೂಣಿಯಾಗಿವೆ. ಅಂಥ ಹೋರಾಟಕ್ಕೆ ದಾರಿ ತೋರಿಸುತ್ತಿವೆ. ಪ್ರೋತ್ಸಾಹ ನೀಡುತ್ತಿವೆ. ಸಿ.ಪಿ.ಐ.(ಎಂ) ಪಕ್ಷದ ಮುಖಂಡತ್ವದಲ್ಲಿರುವ ಪಶ್ಚಿಮ ಬಂಗಾಲ ಮತ್ತು ತ್ರಿಪುರಾ ಸರ್ಕಾರಗಳು ನಿರುದ್ಯೋಗಿಗಳಿಗೆ ಭತ್ತೆ ನೀಡುತ್ತಿರುವುದಲ್ಲದೆ, ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕವೇ ನೇಮಕಾತಿಯನ್ನು ಕಡ್ಡಾಯಗೊಳಿಸಿವೆ.

ಕರ್ನಾಟಕ ರಾಜ್ಯಾದ್ಯಂತ

ವಿಜೃಂಭಣೆಯ ಮೇ ಶತಮಾನೋತ್ಸವ

1886 ಮೇ ತಿಂಗಳಲ್ಲಿ ಚಿಕಾಗೋ ಕಾರ್ಮಿಕರು ಪ್ರಾರಂಭಿಸಿದ 8 ಗಂಟೆ ದುಡಿತದ ದಿನಕ್ಕಾಗಿ ನಡೆಸಿದ ಹೋರಾಟ ಕಾರ್ಮಿಕ ವರ್ಗ ತಮ್ಮ ಸಂಘಟಿತ ಚಳುವಳಿಯಿಂದ ಹಲವಾರು ಬೇಡಿಕೆಗಳನ್ನು ಪಡೆಯುವಲ್ಲಿ ಯಶಸ್ವಿಯಾಯಿತಷ್ಟೇ ಅಲ್ಲ ಜಗತ್ತಿನ ಮೂರರ ಒಂದು ಭಾಗದಲ್ಲಿ ರಾಜಕೀಯ ಅಧಿಕಾರ ಪಡೆಯುವುದರಲ್ಲಿಯೂ, ನಾಝಿಝಮನ್ನು ನಾಶ ಮಾಡುವಲ್ಲಿಯೂ, ರೇಗನನ ಯುದ್ಧ ಪಿಪಾಸೆಯನ್ನು ತಡೆಗಟ್ಟುವುದರಲ್ಲಿಯೂ ಯಶಸ್ವಿಯಾಗಿದೆ. ಮೇ ದಿನಾಚರಣೆ ಪ್ರಾರಂಭಿಸಿ ಈ ವರ್ಷ ನೂರು ವರ್ಷ ತುಂಬಿದ್ದು ಈ ಶತಮಾನೋತ್ಸವವನ್ನು ವಿಜೃಂಭಣೆಯಿಂದ, ಅಗಲಿದ ಕಾರ್ಮಿಕ ಹುತಾತ್ಮರ ಸ್ಮರಣೆಗೆ ಸಮರ್ಪಕವಾಗುವಂತೆ ಆಚರಿಸಬೇಕೆಂದು ಸಿ. ಐ. ಟಿ. ಯು ಕರೆಕೊಟ್ಟದ್ದು, ಇತರ ಕಾರ್ಮಿಕ ಸಂಘಗಳೊಡನೆ ಜಂಟಿಯಾಗಿ ರಾಜ್ಯಾದ್ಯಂತ ನಡೆಸಿದ ಮೇ ದಿನಾಚರಣೆಯ ವರದಿಗಳನ್ನು ಸಂಕ್ಷಿಪ್ತವಾಗಿ ಓದುಗರ ಮುಂದಿಡುತ್ತಿದ್ದೇವೆ. ಗುಲ್ಬರ್ಗಾ, ಶಹಾಬಾದ್, ದಾಂಡೇಲಿ, ಬೆಂಗಳೂರು, ಕೆ. ಜಿ. ಎಫ್. ಹಾಗೆಯೇ ಕಡೂರು, ಚಿಕ್ಕಮಗಳೂರು, ಕಳಸ ಪ್ರದೇಶದ ತೋಟಗಳ ಕಾರ್ಮಿಕರ ಮನೆಗಳಲ್ಲೆಲ್ಲ ಕೆಂಬಾವುಟ ಹಾರಿಸಿರುವುದು ಹಾಗೆಯೇ ಹಲವಾರು ನಗರಗಳನ್ನು ಕೆಂಬಾವುಟದಿಂದ ಅಲಂಕರಿಸಿರುವುದು ಈ ವರ್ಷದ ಮೇ ದಿನಾಚರಣೆಯ ವೈಶಿಷ್ಟ್ಯ.

ಬೆಂಗಳೂರು

ಸಿ ಐ ಟಿ ಯು, ಎ ಐ ಟಿ ಯು ಸಿ, ಎನ್ ಜಿ ಓ, ಬ್ಯಾಂಕ್, ಎಲ್ ಐ ಸಿ, ಪಿ ಎನ್ ಟಿ, ಸರ್ವೆ ಆಫ್ ಇಂಡಿಯಾ, ಮೊದಲಾದ ಕಾರ್ಮಿಕ ಕೇಂದ್ರ ಸಂಘಟನೆಗಳ ಪರವಾಗಿ 25,000ದಷ್ಟು ಕಾರ್ಮಿಕರ ಬೃಹತ್ ಮೆರವಣಿಗೆ ಪ್ರಚಂಡ ಸಾರ್ವಜನಿಕ ಸಭೆಯ ಮೂಲಕ ಬೆಂಗಳೂರು ನಗರದಲ್ಲಿ ಮೇ ಶತಮಾನೋತ್ಸವವನ್ನು ಆಚರಿಸಿದರು. ಒಂದು ಲಕ್ಷಕ್ಕೂ ಮಿರಿ ಕರಪತ್ರಗಳನ್ನು ಹಂಚಿ, 5000 ದಷ್ಟು ಪೋಸ್ಟರ್‌ಗಳನ್ನು ಅಂಟಿಸಲಾಗಿತ್ತು. 50 ಸಾವಿರ ಮೇ ದಿನದ ಪ್ರಣಾಳಿಕ ಮತ್ತು ಬ್ಯಾಡ್ಜ್‌ಗಳನ್ನು 50 ಪೈಸೆಗೆ ಮಾರಾಟ ಮಾಡಲಾಯಿತು.

ಕೆ. ಆರ್. ಪುರದಿಂದ ಕೆಂಪುಸೀರೆ ಉಟ್ಟ ನೂರಾರು ಮಹಿಳಾ ಕಾರ್ಮಿಕರನ್ನೊಳಗೊಂಡ ಸಾವಿರಕ್ಕೂ ಹೆಚ್ಚು ಕೆಲಸಗಾರರು, ಮೈಸೂರು ರಸ್ತೆಯಿಂದ ವೇಶಧಾರಿ ಕಾರ್ಮಿಕರು, ಬ್ಯಾಂಡ್ ಬಾಜಾಗಳೊಡನೆ ಮಿನರ್ವಾ, ಮೈಸೂರ್ ಮಿಲ್, ಮೈಸೂರು ಲ್ಯಾಂಪ್, ಯಶವಂತಪುರದ ಹಾಗೆಯೇ ಮೈಕೋ ಮೊದಲಾದ ಸಿ ಐ ಟಿ ಯು ನೇತೃತ್ವದ ಕಾರ್ಮಿಕರೂ, ಇತರ ಕೇಂದ್ರೀಯ ಸಂಘಟನೆಗಳ ಕಾರ್ಮಿಕರೂ ಸಿಲ್ವರ್ ಜುಬಿಲಿ ಪಾರ್ಕ್‌ನಿಂದ ಮೆರವಣಿಗೆಯಲ್ಲಿ ಹೊರಟು ನ್ಯಾಷನಲ್ ಕಾಲೇಜ್ ಮೈದಾನಿನಲ್ಲಿ ಸಮಾವೇಶಗೊಂಡರು. ಅಲ್ಲಿ ಸಿ ಐ ಟಿ ಯು ರಾಜ್ಯಸಮಿತಿ ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್, ಎ ಐ ಟಿ ಯು ಸಿ ಮುಖಂಡ ಎಂ. ಎಸ್. ಕೃಷ್ಣನ್, ಆರ್. ಶ್ರೀನಿವಾಸ್ ಮೊದಲಾದವರು ಭಾಷಣ ಮಾಡಿದರು.

ಕೊನೆಯಲ್ಲಿ ಸಮುದಾಯದವರಿಂದ "ಮುಳಿದೂತರು" ಮತ್ತು "ಜಾದೂ ಜಗತ್" ನಾಟಕಗಳನ್ನು ಅಭಿನಯಿಸಲಾಯಿತು.

ಮೇ ಶತಮಾನೋತ್ಸವದ ಪೂರ್ವಭಾವಿಯಾಗಿ ಬೆಂಗಳೂರಿನಲ್ಲಿ ಸಿ. ಐ. ಟಿ. ಯು. ಒಂದು ವಾರ ಹಲವಾರು ಕಾರ್ಮಿಕ ಪ್ರದೇಶಗಳಲ್ಲಿ ಮೇ ಶತಮಾನೋತ್ಸವದ ಪ್ರಚಾರ ಸಭೆಗಳನ್ನು ಏರ್ಪಡಿಸಿದ್ದರು.

ಕುಂದಾಪುರ

ಮೇ ಒಂದರಂದು ಕುಂದಾಪುರದಲ್ಲಿ ಸಿಐಟಿಯುವಿಗೆ ಸೇರಿದ ಸಂಘಗಳ ನೇತೃತ್ವದಲ್ಲಿ ಮೇ ದಿನದ ಶತಮಾನೋತ್ಸವದ ಅಂಗವಾಗಿ ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಸಭೆ ನಡೆಯಿತು. ಮಹಾಬಲ ವಡೇರಹೋಬಳಿಯವರು ಸ್ವಾಗತಿಸಿ, ಮೇ ದಿನದ ಮಹತ್ವವನ್ನು ಸಭೆಯಲ್ಲಿ ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ಹಂಚಿಕ ಮಜೂರರ ಸಂಘದ ಕಾರ್ಯದರ್ಶಿ ಸಿ. ನಾರಾಯಣನವರು ವಹಿಸಿದ್ದರು. ಸಭೆ ಮತ್ತು ಮೆರವಣಿಗೆಯಲ್ಲಿ ಹಂಚು, ಬೀಡಿ, ಹೋಟೆಲ್, ಪ್ಲೈವುಡ್ ಕಾರ್ಮಿಕರು, ರಿಕ್ಷಾ ಚಾಲಕರು ಮತ್ತು ರೈತ-ಕೃಷಿ ಕೂಲಿಗಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುತ್ತಾರೆ.

ಸಭೆಯನ್ನುದ್ದೇಶಿಸಿ ದ.ಕ. ಜಿಲ್ಲಾ ಸಿ.ಐ.ಟಿ.ಯುವಿನ ಸಹ ಕಾರ್ಯದರ್ಶಿಯವರಾದ ಕೆ. ಶಂಕರ್‌ರವರು ಮಾತನಾಡಿ, ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಬುಡಮೇಲು ಮಾಡುವ ಸಾಮ್ರಾಜ್ಯಶಾಹಿಗಳ ಪಿತೂರಿಗಳ ವಿರುದ್ಧ ಜಾಗೃತರಾಗಿದ್ದು, ಶ್ರಮಜೀವಿಗಳ ಐಕ್ಯತೆಯನ್ನು ಛಿದ್ರಗೊಳಿಸುವ ಪ್ರಾದೇಶಿಕ, ಪ್ರತ್ಯೇಕತಾವಾದಿ, ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯನ್ನು ಸಾಧಿಸಲು ಮತ್ತು ಆ ಮೂಲಕ ಸಾಮಾಜಿಕ ಪರಿವರ್ತನೆಯ ದಾರಿಯಲ್ಲಿ ಮುನ್ನಡೆಯಲು ಮೇ ದಿನದಂದು ಪಣತೊಡಬೇಕು. ಅಂತ ಹೇಳಿದರು.

ವಿದ್ಯಾರ್ಥಿಗಳ ಮುಖಂಡರಾದ ಕೆ. ವಿಶ್ವನಾಥನವರು ಮಾತನಾಡಿ ಬಂಡವಾಳಶಾಹಿಗಳ ಕೈಯಿಂದ ಕಾರ್ಮಿಕರ ಶೋಷಣೆಯನ್ನು ತಪ್ಪಿಸಲು ಶ್ರಮಿಕ ವರ್ಗ ಸಂಘಟಿತವಾಗಬೇಕೆಂದೂ ಹೇಳಿ ವಿದ್ಯಾರ್ಥಿ ಮತ್ತು ಯುವ ಜನರೂ ಕೂಡಾ ಇದರಲ್ಲಿ ಪಾಲುಗೊಳುತ್ತಾರೆ ಅಂತ ಹೇಳಿದರು.

ದ.ಕ. ಜಿಲ್ಲಾ ರೈತ ಸಂಘದ ಕಾರ್ಯದರ್ಶಿಯವರಾದ ಶ್ರೀ ಅಬ್ರಹಾಂ ಕರ್ಕಡರವರು ಮಾತನಾಡಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿಗಳ ಯುದ್ಧ ಘೋರ ನೀತಿಯಿಂದಾಗಿ ಜಗತ್ತು ಇಂದು ಭೀಕರವಾದ ಪರಮಾಣು ಯುದ್ಧದ ಅಪಾಯವನ್ನು ಎದುರಿಸುತ್ತಿದೆ. ರೈತರು ಕಾರ್ಮಿಕರು ಹಾಗೂ ಇತರ ವಿಭಾಗದ ಜನರು ಜಾಗತಿಕ ಶಾಂತಿಗಾಗಿ ಹೋರಾಟ ನಡೆಸುವುದರೊಂದಿಗೆ ಜನಸಾಮಾನ್ಯರಲ್ಲಿ ಜಾಗೃತಿ ಹುಟ್ಟಿಸುವುದಕ್ಕಾಗಿ ನಿರಂತರ ಶ್ರಮಿಸಬೇಕೆಂದರು. ಕೊನೆಗೆ ತಾಲೂಕು ರೈತ ಸಂಘದ ಕಾರ್ಯದರ್ಶಿಯವರಾದ ಯು. ದಾಸ ಭಂಡಾರಿಯವರು ಅಭಿನಂದನೆ ಸಲ್ಲಿಸಿದರು.

ಪಾಣೆಮಂಗಳೂರು

ಸಿ. ಐ. ಟಿ. ಯು. ವಿನ ಆಶ್ರಯದಲ್ಲಿ ಪಾಣೆಮಂಗಳೂರಿನ ಆಲಡ್ಕ ಮೈದಾನಿನಲ್ಲಿ ಮೇ ದಿನಾಚರಣೆಯ ಶತಮಾನೋತ್ಸವದ ಸಾರ್ವಜನಿಕ ಸಭೆಯೊಂದು ತಾ : 4 ರಂದು ಜರುಗಿತು.

ಸಭೆಯ ಅಧ್ಯಕ್ಷತೆಯನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬಂಟ್ವಾಳ ತಾಲೂಕು ಸಮಿತಿಯ ಕಾರ್ಯದರ್ಶಿ ಬಿ. ವಾಸುಗಟ್ಟಿ ವಹಿಸಿದರು.

ಆರಂಭದಲ್ಲಿ ಜಿಲ್ಲೆಯ ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ನಿನ ಸಹಾಯಕ ಕಾರ್ಯದರ್ಶಿ ಉಮೇಶ ಭಂಡಾರಿಯವರು ಸ್ವಾಗತಿಸಿ, ಮೇ ದಿನದ ಇತಿಹಾಸವನ್ನು ತಿಳಿಸಿದರು

ಜಿಲ್ಲೆಯ ಸಿ ಐ ಟಿ. ಯು. ವಿನ ಕಾರ್ಯದರ್ಶಿ ಕೆ. ಮೂಸಬ್ಬನವರು ಸಭೆಯನ್ನು — ಉದ್ದೇಶಿಸಿ ಮಾತನಾಡಿ, ಬಂಡವಾಳಶಾಹೀ ಭೂ ಮಾಲಕ ಪರವಾದ ಸರಕಾರವಿರುವ ಭಾರತದಲ್ಲಿ ಅನೇಕ ವರ್ಷಗಳ ಹೋರಾಟದ ನಂತರ 8 ಗಂಟೆಗಳ ಕೆಲಸ ಮಾಡುವ ಕಾನೂನುಗಳು ಬಂದಿದ್ದರೂ, ದೇಶದ ಕೋಟಿಗಟ್ಟಲೆ ಕಾರ್ಮಿಕರು ಇವುಗಳಿಂದ ವಂಚಿತರಾಗಿದ್ದಾರೆ ಎಂದು ಹೇಳಿ ಉದ್ಯೋಗದ ಭದ್ರತೆ ಇಲ್ಲದೆ, ಕೆಲಸದ ಗಂಟೆಗಳ ಮಿತಿ ಇಲ್ಲದೆ. ಗುಲಾಮಗಿರಿಯಲ್ಲಿ ದುಡಿವ ಪರಿಸ್ಥಿತಿ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಇದೆ ಎಂದು ಹೇಳಿದರು. ರೈತ ಕಾರ್ಮಿಕರ ಸಖ್ಯತೆಯ ಹೋರಾದಲ್ಲಿ ವಿಸ್ತಾರ ವಿಭಾಗದ ಜನತೆಗೆ ಆಳುವ ವರ್ಗದ ಜನವಿರೋಧಿ ನೀತಿ ವಿವರಿಸಿ ಹೇಳುವ ಮೂಲಕ ಜನತಾ ಪ್ರಜಾಪ್ರಭುತ್ವರಂಗವನ್ನು ಕಾರ್ಮಿಕ ವರ್ಗದ ನೇತೃತ್ವದಲ್ಲಿ ರಚಿಸಬೇಕೆಂದು ಮೂಸಬ್ಬ ಕರೆ ನೀಡಿದರು.

ಸಭಾಧ್ಯಕ್ಷತೆ ವಹಿಸಿದ ವಾಸುಗಟ್ಟಿಯವರು ಮಾತನಾಡಿ ಕಾರ್ಮಿಕರು ತಮ್ಮ ಬೇಡಿಕೆ ಹಾಗೂ ಹಕ್ಕು ಬಾಧ್ಯತೆಗಳಿಗಾಗಿ ಮಾತ್ರ ಸೀಮಿತ ಹೋರಾಟ ನಡೆಸದೆ ಆಳುವ ಬಂಡವಾಳ ವರ್ಗದ ವರ್ಗನೀತಿಯ ವಿರುದ್ಧ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಪಾಣೆಮಂಗಳೂರಿನ ಬೀಡಿ ಲೇಬರ್ ಯೂನಿಯನ್ನಿನ ಕಾರ್ಯದರ್ಶಿ ಬಿ. ನಾರಾಯಣ ಬಂಟ್ವಾಳ ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷ ಬಿ.ಹೂವಯ್ಯ ಬಂಗೇರರು ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಸಭಾ ಪೂರ್ವದಲ್ಲಿ ಕಾರ್ಮಿಕರ ಮೆರವಣಿಗೆ ನಡೆಸಲಾಯಿತು.

ಉಡುಪಿ

ಮೇ ದಿನದ ಶತಮಾನೋತ್ಸವ ಉಡುಪಿಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಉಡುಪಿಯ ಕಾರ್ಮಿಕ ಸಂಘಗಳಾದ ಬ್ಯಾಂಕ, ವಿಮಾ, ರಾಜ್ಯ ಸರಕಾರಿ ನೌಕರರಲ್ಲದೆ, ಸಿ.ಐ.ಟಿ.ಯು. ಮತ್ತು ಎ. ಐ. ಟಿ. ಯು. ಸಿ. ಗೆ ಸೇರಿದ ಕಾರ್ಮಿಕರೆಲ್ಲ ನಗರದಲ್ಲಿ ಪ್ರದರ್ಶನ ನಡೆಸಿ ರಥ ಬೀದಿಯಲ್ಲಿ ಸಭೆ ನಡೆಸಿದರು.

ಬ್ಯಾಂಕ್ ನೌಕರರ ಮುಂದಾಳು ರಾಘವೇಂದ್ರರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಎ ಐ ಟಿ. ಯು ಸಿ. ಮುಂದಾಳು ಬಿ.ಕೆ.ಕೃಷ್ಣಪ್ಪ, ವಿಮಾ ಕಾರ್ಮಿಕರ ಮುಖಂಡ ಪಿ ವಿಶ್ವನಾಥ, ರಾಜ್ಯ ಸರಕಾರಿ ನೌಕರರ ಸಂಘದ ಕಾರ್ಯದರ್ಶಿ ಎಸ್.ಎಸ್. ತೋನ್ಸೆ, ಸಿ.ಐ.ಟಿ.ಯುವಿನ ದೇವಿಡ್ ಕರ್ಕಡ್ ಮೊದಲಾದವರು ಮಾತಾಡಿ ಮೇ ದಿನದ ಮಹತ್ವ ಮೇ ದಿನದ ಪರಂಪರೆಯಾಗಿ ಬೆಳೆದುಬಂದಿರುವ ಭಾರತದ ಕಾರ್ಮಿಕ ವರ್ಗದ ಪಾತ್ರವನ್ನೂ ಮಾರ್ಕ್ಸವಾದ-ಲೆನಿನ್‌ವಾದದ ಸಿದ್ಧಾಂತವನ್ನು ಅರಗಿಸಿಕೊಂಡ ಕಾರ್ಮಿಕ ವರ್ಗ ಹಲವಾರು ದೇಶಗಳಲ್ಲಿ ಅಧಿಕಾರ ಸ್ಥಾಪಿಸಿದ ಹಿನ್ನೆಲೆಯನ್ನು, ಸಮತಾವಾದವನ್ನು ನಾಶಮಾಡಲು ಹೊರಟ ಫ್ಯಾಸಿಸ್ಟರ ಸ್ವಂತ ನಿರ್ನಾಮವನ್ನೂ ತಿಳಿಸಿ ಹೇಳಿ, ವಿಶ್ವದ ದುಡಿಯುವ ವರ್ಗದ ಹಿತ ಸಾಧಿಸಬೇಕಾದರೆ ಸಮಾಜವಾದ ಪದ್ಧತಿಯ ಅನಿವಾರ್ಯತೆಯನ್ನೂ ವಿವರಿಸಿ ಆದಕ್ಕಾಗಿ ಕಾರ್ಮಿಕರೆಲ್ಲ ಒಗ್ಗಟ್ಟಾಗಿ ಹೋರಾಡಬೇಕೆಂದು ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಯುದ್ಧದ ಪ್ರಯತ್ನವನ್ನು ಖಂಡಿಸುತ್ತ ಕಾರ್ಮಿಕರು ಜಾಗೃತರಾಗಿ ಯುದ್ಧದ ಪಿತೂರಿಗಳ ವಿರುದ್ಧ ಹೋರಾಡಬೇಕೆಂದರು.

ಪ್ರಾರಂಭದಲ್ಲಿ ಎಚ್.ವಿಠ್ಠಲ ಸ್ವಾಗತಿಸಿದರು. ಕೊನೆಯಲ್ಲಿ ಬಿ.ಮೊನಪ್ಪ ಸಾಲಿಯಾನ್ ವಂದನಾರ್ಪಣೆ ಮಾಡಿದರು.

ಬಂಟ್ವಾಳ

ಬಂಟ್ವಾಳದಲ್ಲಿ ಸಿ. ಐ. ಟಿ. ಯು. ಮತ್ತು ಎ. ಐ. ಟಿ. ಯು. ಸಿ. ಯ ಕಾರ್ಮಿಕ ಸಂಘಗಳು ಸಂಯುಕ್ತವಾಗಿ ಜಾಗತಿಕ ಕಾರ್ಮಿಕರ ಐಕ್ಯತಾ ದಿನವಾದ ಮೇ 1ನ್ನು ಬಹಳ ವಿಜೃಂಭಣೆಯಿಂದ ಜರಗಿಸಿದರು. ವಿವಿಧ ಭಾಗಗಳಿಂದ ಬಂದ ಕಾರ್ಮಿಕರ ಮೆರವಣಿಗೆಯು ಬಂಟ್ವಾಳದ ಬಸ್ಸು ಪಡಿವಿನಲ್ಲಿ ಸಭೆ ಸೇರಿ ವರ್ಣ ರಂಜಿತವಾದ ಬೃಹತ್ ಪ್ರದರ್ಶನವನ್ನು ನಡೆಸಿತು. ವಿವಿಧ ವಿನೋದಾವಳಿಗಳನ್ನು ಪ್ರದರ್ಶಿಸುವ ವೇಷಗಳು, ಲೋಕ ಶಾಂತಿಯನ್ನು ಬಯಸುವ ಘೋಷಣೆಗಳು, ನಾಗರಿಕ ಮಹಾ ಜನತೆಯನ್ನು ಆಕರ್ಷಿಸಿತ್ತು.

ಮೇ ಶತಮಾನೋತ್ಸವದ ಬಹಿರಂಗ ಸಭೆಯನ್ನು ಸಿ. ಐ. ಟಿ ಯು. ವಿನ

(6ನೇ ಪುಟ ನೋಡಿ)

ಸಿಪಿಐನ ೧೩ನೇ ಮಹಾಧಿವೇಶನ ಕುರಿತು

ಭಾರತ ಕಮ್ಯುನಿಸ್ಟ್ ಪಕ್ಷ 1986 ಮಾರ್ಚ ಮೂರನೇವಾರದಲ್ಲಿ ಪಾಟ್ನಾದಲ್ಲಿ ತನ್ನ 13 ನೇ ಮಹಾಧಿವೇಶನ ನಡೆಸಿತು. 1985 ರ ಡಿಸೆಂಬರ್‌ನಲ್ಲಿ ಪ್ರಕಟಿಸಲ್ಪಟ್ಟ ಕರಡು ರಾಜಕೀಯ ನಿರ್ಣಯಕ್ಕೆ ಇದು ಅಂತಿಮ ರೂಪ ಕೊಟ್ಟು ಪತ್ರಿಕೆಗಳಿಗೆ ಬಿಡುಗಡೆ ಮಾಡಿದೆ. ಈ ರಾಜಕೀಯ ನಿರ್ಣಯ ಕಳೆದ ಹತ್ತು ವರ್ಷಗಳ ಸಿ ಪಿ ಐ. ನ ಇತರ ಮಹಾಧಿವೇಶನಗಳ ನಿರ್ಣಯಕ್ಕೆ ಹೋಲಿಸಿದರೆ ಹೆಚ್ಚು ಉಲ್ಲಾಸಕಾರಿ ಹಾಗೂ ಚೊಕ್ಕಟವಾಗಿದೆ. ಆಳುವ ಕಾಂಗ್ರೆಸ್ ಪಕ್ಷದ ಸಾಮಾಜಿಕ ಆರ್ಥಿಕ ಧೋರಣೆಗಳ ಟೀಕೆ ತೀಕ್ಷ್ಣವಾಗಿದೆ. ಕಾಂಗ್ರೆಸ್ ಸರಕಾರ ಬಂಡವಾಳಿಶಾಹಿ ಬೆಳವಣಿಗೆಯ ತನ್ನ ಈ ನೀತಿಯನ್ನು ಖಾಸಗಿ ವಲಯದ ಮೇಲೆ ಹಾಗೂ ವಿದೇಶೀ ಬಹು ರಾಷ್ಟ್ರೀಯ ಖಾಸಗೀ ಬಂಡವಾಳದ ಮೇಲೆ ಹೆಚ್ಚು ಅವಲಂಬನೆಯ ಮೂಲಕ ಮುಂದುವರಿಸುತ್ತಿದೆಯೆಂದ ರಾಜಕೀಯ ನಿರ್ಣಯ "ಆದ್ದರಿಂದ ಈ ಎರಡು ಹೋರಾಟಗಳು, ಅಂದರೆ ಸಾಮ್ರಾಜ್ಯಶಾಹಿಯ ನವವಸಾಹತುಶಾಹಿ ದಾಳಿಯ ವಿರುದ್ಧ ಹಾಗೂ ಸರಕಾರ ಆಚರಿಸುತ್ತಿರುವ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟಗಳು ಪರಸ್ಪರ ಪ್ರತ್ಯೇಕಿಸಲಾಗದಂತಹ ರೀತಿಯಲ್ಲಿ ಬೆಸೆದುಕೊಂಡಿವೆಯೆಂಬುದನ್ನು ಅರಿಯಬೇಕು. ಎಂದು ಎಚ್ಚರಿಸಿ "ಕಳೆದ ವರ್ಷ ಸಮಾಜವಾದಿ ದೇಶಗಳೊಂದಿಗೆ ಮಾಡಿಕೊಂಡ ಮಹತ್ವಪೂರ್ಣ ಒಪ್ಪಂದಗಳನ್ನು ಜಾರಿಗೊಳಿಸುವಲ್ಲಿ ಸರಕಾರ ಹಿಂಜರಿಕೆ ನೀತಿ ಅನುಸರಿಸುತ್ತಿದೆಯೆಂಬುದು ಆತಂಕಕಾರಿ" ಎಂದಿದೆ.

ಕಾಂಗ್ರೆಸ್ ಪಕ್ಷದ ಕೃಷಿ ಧೋರಣೆಗಳ ಕುರಿತು ಹೇಳುತ್ತಾ ಸಿ.ಪಿ ಐ ನ ನಿರ್ಣಯ ದೊಡ್ಡ ಜಮೀನು ಹಿಡುವಳಿಗಳನ್ನು ಭೂಸುಧಾರಣಾ ಕಾನೂನುಗಳಲ್ಲಿ ಉದ್ದೇಶಪೂರ್ವಕವಾಗಿ ಬಿಟ್ಟಿರುವ ನ್ಯೂನತೆಗಳ ಲಾಭ ಪಡೆದು ಅಡಗಿಸಿಕೊಳ್ಳಲಾಗುತ್ತಿದೆ, ಅವನ್ನು ವಿತರಣೆ ಮಾಡಲಾಗುತ್ತಿಲ್ಲ ಎಂದು ಹೇಳಿ "ಸರಕಾರದ ಆಡಳಿತ ಸೂತ್ರ ಹಿಡಿದ ವರ್ಗ ಹಾಗೂ ಪಕ್ಷಗಳಿಗೆ ಸೂಕ್ತ ರಾಜಕೀಯ ದೃಢನಿರ್ಧಾರವಿಲ್ಲದುದರಿಂದ ಭೂವಿತರಣೆಯಾಗಿಲ್ಲ"ಎನ್ನುತ್ತದೆ.

ಸಿ.ಪಿ.ಐ(ಎಂ) ಕಾಂಗ್ರೆಸ್ ಆಳ್ವಿಕೆಯಲ್ಲಿ ಖೋಟಾ ಭೂವಿತರಣೆಯ ಸಂಗತಿಯನ್ನು ಒಪ್ಪುತ್ತದೆಯಾದರೂ ಇದಕ್ಕೆ ಭೂಮಾಲೀಕರು ಆಳ್ವಿಕೆಯಲ್ಲಿ ಹಿರಿಬೂರ್ಜ್ವಾ ವರ್ಗದ ಮಿತ್ರರಾಗಿರುವುದೇ ಕಾರಣ ಎನ್ನುತ್ತದೆ. ದೊಡ್ಡ ಭೂಮಾಲೀಕರು ಬಹಳ ಸಂಖ್ಯೆಯಲ್ಲಿ ಎಂ.ಎಲ್.ಎ.ಗಳು, ಎಂ.ಪಿ. ಗಳು, ಮಂತ್ರಿಗಳು ಹಾಗೂ ಕಾಂಗ್ರೆಸ್ ಸಂಘಟನೆಯಲ್ಲಿ ಪ್ರಮುಖ ಸ್ಥಾನಗಳಲ್ಲಿರುವುದು ನಿರ್ವಿವಾದ ಸಂಗತಿ. ಅಧಿಕಾರ ಶಾಹಿಯಲ್ಲೂ ಭೂಮಾಲಕ ಹಾಗೂ ಭೂಮಾಲಕ ಪರ ಶಕ್ತಿಗಳು ಗಮನಾರ್ಹ ಸಂಖ್ಯೆಯಲ್ಲಿದ್ದು, ಕೃಷಿಸುಧಾರಣೆಗಳನ್ನು ಬುಡಮೇಲು ಮಾಡಲು ಅವು ಸರ್ವ ಪ್ರಯತ್ನ ನಡೆಸುತ್ತಿವೆ.

ಸರಕಾರ ರೈತರನ್ನು ಸುಲಿಯುವ ಮಿಲ್ ಮಾಲೀಕರು, ಗುತ್ತೇದಾರಿಗಳು ಹಾಗೂ ಬಹುರಾಷ್ಟ್ರೀಯ ಕಂಪೆನಿಗಳಿಗೆ ನೆರವಾಗುವ ಧೋರಣೆ ಅನುಸರಿಸುವವರೆಗೆ ರೈತರ ಹಿತಾಸಕ್ತಿ ಕಾಪಾಡಲು ಸಾಧ್ಯವಿಲ್ಲ ಎಂದು ಹೇಳುವ ಸಿ. ಪಿ. ಐ. ನಿರ್ಣಯ "ಕಾಂಗ್ರೆಸ್ (ಐ) ನ ಭೂರ್ಜ್ವಾ ಸರಕಾರದ ಸ್ಥಾನದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಸರಕಾರ ಬರಬೇಕೆಂದು, ಬೇರೊಂದು ಬೂರ್ಜ್ವಾ ಸರಕಾರ ಬರಬಾರದೆಂದು ನಮ್ಮ ಪಕ್ಷ ಆಶಿಸುತ್ತದೆ. ಯಾಕೆಂದರೆ ಇನ್ನೊಂದು ಬೂರ್ಜ್ವಾ ಸರಕಾರವು ಖಂಡಿತವಾಗಿಯೂ ಅದೇ ವಿನಾಶಕಾರೀ ದಾರಿಯನ್ನು ಹಿಡಿಯುತ್ತದೆ." ಎಂದು ಕೊನೆಯಲ್ಲಿ ಹೇಳುತ್ತದೆ.

ಗೊಂದಲ ನಿವಾರಿಸಬೇಕಾಗಿದೆ

ಕಾಂಗ್ರೆಸ್ (ಐ) ಸರಕಾರದ ಸ್ಥಾನದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಸರಕಾರ ತರಬೇಕೆಂಬ ಸಿ. ಪಿ. ಐ. ನ ಈಗಿನ ದೃಢ ನಿಲುವು ಸ್ವಾಗತಾರ್ಹ. ಆದರೆ "ಬೂರ್ಜ್ವಾ ಸರಕಾರ"ವನ್ನು ಉರುಳಿಸಬೇಕೆಂದು ನಿರ್ಣಯ ಹೇಳುವಾಗ ಬೂರ್ಜ್ವಾ ನೇತೃತ್ವದ ಸರಕಾರ ಮಾತ್ರವಲ್ಲ ಸಮಸ್ತ ಬೂರ್ಜ್ವಾವರ್ಗದ (ಇದರಲ್ಲಿ ಹಿರಿಬೂರ್ಜ್ವಾವರ್ಗ ಮತ್ತು ಇವರ ಬೂರ್ಜ್ವಾ ವರ್ಗಎರಡೂ ಸೇರಿವೆ ಸ್ಥಾನದಲ್ಲಿ ಒಂದುಬೂರ್ಜ್ವಾ ವಿರೋಧಿ ಸಮ್ಮಿಶ್ರ ರಂಗ ಬರಬೇಕೆಂದು ಹೇಳಿದ ಹಾಗೂ ಆಗುತ್ತದೆ. ಅಂದರೆ ಸಾಮ್ರಾಜ್ಯಶಾಹಿಯ ವಿರುದ್ಧ, ರಾಷ್ಟ್ರೀಯ ಸ್ವಾತಂತ್ರ್ಯ, ಶಾಂತಿ ಹಾಗೂ ಸಾಮಾಜಿಕ ಪ್ರಗತಿಯ ರಕ್ಷಣೆಯಲ್ಲಿ ಬೂರ್ಜ್ವಾ ವರ್ಗದ ಯಾವ ವಿಭಾಗವೂ ಒಂದು ಮಿತ್ರವಿಭಾಗವಾಗಲಾರದು ಎಂಬ ಅರ್ಥವೂ ಬರುತ್ತದೆ.

ಈ ಬಗ್ಗೆ ಹೆಚ್ಚು ಬೆಳಕು ಬೀರಿ ಗೊಂದಲವನ್ನು ಪರಿಹರಿಸುವುದು ಸಿ. ಪಿ. ಐ. ಮುಂದಾಳುಗಳಿಗೆ ಬಿಟ್ಟದ್ದು. ಸದ್ಯ ಈ ಬಗ್ಗೆ ನಾವು ಯಾವುದೇ ಟೀಕ ಮಾಡಬಯಸುವುದಿಲ್ಲ.

ಪಕ್ಷದ ಮಹಾಧಿವೇಶನ ವಿರೋಧ ಪಕ್ಷಗಳ ಸಮಾವೇಶಗಳಲ್ಲಿ ಭಾಗವಹಿಸುವುದಕ್ಕೆ ಸಂಬಂಧಪಟ್ಟಂತೆ ರಾಷ್ಟ್ರೀಯ ಮಂಡಳಿ, ಕೇಂದ್ರ ಕಾರ್ಯಕಾರಿ ಸಮಿತಿ ಹಾಗೂ ಕಾರ್ಯದರ್ಶಿ ಮಂಡಳಿ ತಳೆದ ಕಾರ್ಯತಂತ್ರಾತ್ಮಕ ನಿಲುವನ್ನು ಅನುಮೋದಿಸಿದೆಯೆಂಬ ಕಾಮ್ರೇಡ್ ರಾಜೇಶ್ವರರಾವ್‌ರವರ ಹೇಳಿಕೆ ಕಾಂಗ್ರೆಸ್‌ನ ಏಕಪಕ್ಷ ಆಡಳಿತ ಹಾಗೂ ಸರ್ವಾಧಿಕಾರಿ ಆಡಳಿತದ ಪ್ರಯತ್ನದ ವಿರುದ್ಧ ಹೋರಾಡುವಲ್ಲಿ ನೆರವಾಗುವ ಮಟ್ಟಿಗೆ ಸ್ವಾಗತಾರ್ಹ.

ಸಿ. ಪಿ. ಐ. ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ ಹೆಚ್ಚು ತೀವ್ರಗಾಮಿ ಹಾಗೂ ಸಕಾರಾತ್ಮಕ ನಿಲುವು ತಳೆದಿದೆ ಎಂಬ ಭಾವನೆ ಅದರ 13 ನೇ ಮಹಾಧಿವೇಶನದ ವರದಿ ಹಾಗೂ ರಾಜಕೀಯ ನಿರ್ಣಯವನ್ನು ನೋಡಿದಾಗ ಉಂಟಾಗುತ್ತದೆ. ಕಾಂಗ್ರೆಸ್ (ಐ) ನ ಜನವಿರೋಧಿ ಧೋರಣೆಗಳ ಬಗ್ಗೆ ಅದು ನೇರವಾದ ಹಾಗೂಸ್ಪಷ್ಟವಾದ ನಿಲುವು ತಳೆದಿದೆ. ಅಮೇರಿಕನ್ ಹಾಗೂ ಇತರ ಆಕ್ರಾಮಕ ಸಾಮ್ರಾಜ್ಯಶಾಹಿ ವಲಯಗಳಿಂದ ಪರಮಾಣು ವಿನಾಶದ ಬೆದರಿಕೆ ಹೆಚ್ಚುತ್ತಿದ್ದು, ನಮ್ಮ ದೇಶದಲ್ಲಿ ಒಂದು ಶಕ್ತಿಶಾಲೀ ಶಾಂತಿಪರ ಹಾಗೂ ಯುದ್ಧ ವಿರೋಧಿ ಆಂದೋಲನ ಕಟ್ಟುವುದರ ಅಗತ್ಯವಿದೆಯೆಂಬುದನ್ನು ಸಿ. ಪಿ. ಐ. (ಎಂ) ಕೂಡಾ ಒಪ್ಪುತ್ತದೆ. ರಾಜೀವ್ ಸರಕಾರದ ಶಾಂತಿ, ಅಲಿಪ್ತತೆ ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯದ ರಕ್ಷಣೆ ಕುರಿತಾದ ಧೋರಣೆಗಳ ಬಗ್ಗೆ ಸಿ.ಪಿ.ಐ. ನ ರಾಜಕೀಯ ನಿರ್ಣಯ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಸಿ.ಪಿ.ಐ (ಎಂ) ನ ಅಭಿಪ್ರಾಯಗಳಂತೆಯೇ ಇವೆ.

ಎಂ. ಬಸವಪುನ್ನಯ್ಯ

ಇದರರ್ಥ ನಮ್ಮೆರಡು ಪಕ್ಷಗಳ ನಡುವೆ ಗಂಭೀರ ಭಿನ್ನಾಭಿಪ್ರಾಯಗಳು ಉಳಿದಿಲ್ಲ ಎಂದೇನೂ ಅಲ್ಲ. ತಕ್ಷಣದ ರಾಜಕೀಯ ಪ್ರಶ್ನೆಗಳ ಬಗ್ಗೆ ಸರಿಯಾದ ನಿಲುವು ತಳೆದ ನಂತರ ಸಿ. ಪಿ, ಐ, ಮುಖಂಡತ್ವ ಎಡ ಐಕ್ಯತೆಯ ಪ್ರಶ್ನೆಯನ್ನು, ತನ್ನ ಕಾರ್ಯಕರ್ತರ ಎದುರು ಸರಿಯಾಗಿ ಪ್ರಸ್ತುತ ಪಡಿಸುವಲ್ಲಿ ಸೋತಿದೆ. ಎಡ ಐಕ್ಯತೆಯ ಪ್ರಶ್ನೆಯಲ್ಲಿ ತನ್ನದೇ ಸರಿ ಎಂಬ ನಿಲುವು ತಳೆದು ಅದರಲ್ಲಿರುವ ತೊಂದರೆಗಳಿಗೆ, ನಿಧಾನಗತಿಯ ಪ್ರಗತಿಗೆ ಸಿ. ಪಿ. ಐ. (ಎಂ) ಕಾರಣ ಎಂದು ಅವರು ಹೇಳುತ್ತಾರೆ. ಇದರಿಂದಾಗಿ ಕೆಲವು ಸಂಗತಿಗಳನ್ನು ಮರೆತಂತಾಗುತ್ತದೆ.

ವರ್ಗ ತಿಳುವಳಿಕೆಯ ಅಭಾವ

ಉದಾಹರಣೆಗೆ ಸಿ. ಪಿ. ಐ. (ಎಂ) ನ್ನು ದೂಷಿಸುತ್ತಾ ಈ ಹಿಂದೆ, 1970 ರಲ್ಲಿ ಹೊರತಂದ ಒಂದು ಪ್ರಕಟಣೆಯಲ್ಲಿ "ಒಂದು ದೇಶದಲ್ಲಿ ಒಂದಕ್ಕಿಂತ ಹೆಚ್ಚು ಕಮ್ಯುನಿಸ್ಟ್ ಪಕ್ಷ ಇರಲು ಸಾಧ್ಯವಿಲ್ಲ ಮತ್ತು ಒಂದು ದೇಶದಲ್ಲಿ ಹಲವು ಕಮ್ಯುನಿಸ್ಟ್ ಪಕ್ಷಗಳಿರುವುದು ಸಾಧ್ಯ ಎಂದು ಕಾರ್ಮಿಕ ವರ್ಗದಲ್ಲಿ ಹಾಗೂ ಕ್ರಾಂತಿಕಾರಿ ಶಕ್ತಿಗಳಲ್ಲಿ ಗೊಂದಲವುಂಟು ಮಾಡಲು ಒಂದು ಕಮ್ಯುನಿಸ್ಟ್‌ಪಕ್ಷ ಸ್ವಯಮಿಚ್ಛೆಯಿಂದ ಒಪ್ಪಿಗೆ ಕೊಡಲು ಸಾಧ್ಯವಿಲ್ಲ" ಎಂದು ಸಿ ಪಿ ಐ. ಮುಖಂಡರು ಹಾಗೂ ಅವರ ಮಾಜೀ ಛೇರ್‌ಮೆನ್ ಹೇಳಿದ್ದರು. ಎಂಬ ಸತ್ಯವನ್ನು ಸಿ. ಪಿ. ಐ. ಮುಖಂಡರು ಮರೆಮಾಚಿದ್ದಾರೆ. ಈ ತಮ್ಮ ತಿಳುವಳಿಕೆಯನ್ನು ಅವರು ಈಗ ತ್ಯಜಿಸಿದ್ದಾರೆಯೇ ಎಂಬುದುಕುತೂಹಲಕಾರಿ. ಅಥವಾ ಒಂದು ದೇಶದಲ್ಲಿ ಒಂದೇ ಕಮ್ಯುನಿಸ್ಟ್ ಪಕ್ಷ ಇರುವುದು ಸಾಧ್ಯ ಎಂದು ಹೇಳಲು ಕೇವಲ ಅವರಿಗೆ ಮಾತ್ರ ಹಕ್ಕಿದೆ ಎಂದು ಇದರ ಅರ್ಥವಾಗಿರಬಹುದೇ? ಇಂತಹ ವಾಗ್ವಾದದ ವಿಧಾನಗಳಿಂದ ಸಿ. ಐ. ಪಿ. ಮುಖಂಡತ್ವದ ಪ್ರತಿಷ್ಠೆಯೇನೂ ಹೆಚ್ಚುವುದಿಲ್ಲ. ಬದಲಿಗೆ ಎಡ ಐಕ್ಯತೆ ಕಟ್ಟುವಲ್ಲಿ ಮತ್ತಷ್ಟು ತೊಂದರೆಯುಂಟು ಮಾಡುತ್ತದೆ.

ಈಗ ರಾಜೀವ್ ಸರಕಾರದ ಬಗ್ಗೆ ಸಿ. ಪಿ. ಐ. ಮುಖಂಡತ್ವದ ನಿಲುವು ಸ್ವಾಗತಾರ್ಹವಾಗಿದ್ದರೂ, ಈ ಹಿಂದೆ ಕಾಂಗ್ರೆಸ್‌ನ ಬಾಲ ಹಿಡಿದ, ತುರ್ತು ಪರಿಸ್ಥಿತಿಯನ್ನು ಅನಿವಾರ್ಯ ಎಂದು ಸ್ವೀಕರಿಸಿದ ಬಗ್ಗೆ ಅವರು ಯಾವ ವರ್ಗ ವಿವರಣೆಯನ್ನೂ ನೀಡಿ ಎಂಬುದನ್ನು ನಾವು ನೆನಪಿಡಬೇಕಾಗಿದೆ. ಈ ರೀತಿಯ ಮಾರ್ಗಚ್ಯುತಿಯನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದ ದೃಷ್ಟಿಯಿಂದ ವಿವರಿಸುವ ಧೈರ್ಯತೋರದ, ಅದನ್ನು ತೀಕ್ಷ್ಣವಾಗಿ ಟೀಕಿಸದ ಒಂದು ನಾಯಕತ್ವವನ್ನು ಏನೆಂದು ವರ್ಣಿಸಬೇಕು ? ಅದು ಪರಿಷ್ಕರಣವಾದಿ ತಪ್ಪಾಗಿತ್ತೇ? ಸುಧಾರಣಾವಾದಿ ತಪ್ಪಾಗಿತ್ತೇ ಅಥವಾ ಪಂಥವಾದೀ ತಪ್ಪಾಗಿತ್ತೇ ? ಇಂತಹ ತಪ್ಪುಗಳ ವರ್ಗ ಮೂಲವೇನು ?

ಈ ರೀತಿ ತಮ್ಮ ತಪ್ಪುಗಳ ಒಂದು ಸ್ಪಷ್ಟ ವರ್ಗ ತಿಳುವಳಿಕೆಯ ಅಭಾವ ಮತ್ತು ಹಳೆಯ ಆ ದೃಷ್ಟಿಕೋನದ ಇನ್ನೂ ಉಳಿದಿರುವ ಅಂಶದಿಂದಾಗಿ ಅವರ ದೃಷ್ಟಿ ಮಂಜಾಗಿ, ಕಷ್ಟಗಳು ಎದುರಾದಾಗ ಅವರು ಸಿ. ಪಿ.ಐ. (ಎಂ) ನಲ್ಲಿ ತಪ್ಪು ಹುಡುಕುವಂತಾಗುತ್ತದೆ.

ಉದಾಹರಣೆಗೆ, "ಜಾಗತಿಕ ಕಮ್ಯುನಿಸ್ಟ್ ಆಂದೋಲನದ ನಿಲುವಿನಿಂದ ದೂರ ಸರಿದ ಸಿ.ಪಿ.ಐ.(ಎಂ) ಇತ್ತೀಚಿನ ವರ್ಷಗಳಲ್ಲಿ ಸಮೀಪ ಬರಲಾರಂಭಿಸಿದೆ" ಎಂಬ ಅವರ ಹೇಳಿಕೆಯನ್ನೇ ತಗೊಳ್ಳಿ. ಸಿ ಪಿ.ಐ. ಮುಖಂಡರು ಜಾಗತಿಕ ಆಂದೋಲನದ ಸಮೀಪವಿದ್ದುದರಿಂದಲೇ ಇಂದಿರಾಗಾಂಧಿ ಜನರನ್ನು ದಮನ ಮಾಡಿ ಜೈಲಿಗಟ್ಟುತ್ತಿದ್ದಾಗ, ಸಾವಿರಾರು ಜನಗಳಿಗೆ ಬಲವಂತದ ಸಂತಾನ ನಿರೋಧ ನಡೆಸುತ್ತಿದ್ದಾಗ ಆಕೆಯನ್ನು ಬೆಂಬಲಿಸಿದರು. ಎಂತಹ ಅದ್ಭುತ ಸಾಮಿಪ್ಯವಿದು !

ಜಾಗತಿಕ ಆಂದೋಲನದೊಂದಿಗೆ ಅವರ ಈ ಸಾಮಿಪ್ಯ ಜೆಕೊಸ್ಲೊವಾಕಿಯಾದಲ್ಲಿ ಸೋವಿಯೆಟ್ ಮಧ್ಯ ಪ್ರವೇಶದ ಪ್ರಶ್ನೆಯಲ್ಲಿಆರುತಿಂಗಳವರೆಗೆ ಯಾವುದೇ ನಿರ್ಧಾರಕ್ಕೆ ಬರಲು ಅವರಿಗೆ ಸಾಧ್ಯವಾಗದಾದಾಗ ಇನ್ನಷ್ಟು ಚೆನ್ನಾಗಿ ವ್ಯಕ್ತಗೊಂಡಿತು. "ಸಮೀಪವಿದ್ದ" ಸಿ. ಪಿ. ಐ. ಅಂತರರಾಷ್ಟ್ರೀಯತೆಯನ್ನು ತ್ಯಜಿಸಿಬೂರ್ಜ್ವಾ ರಾಷ್ಟ್ರೀಯತೆಗೆ ಬಲಿಯಾದಾಗ, "ದೂರ ಸರಿದಿದ್ದ" ಸಿ.ಪಿ.ಐ. (ಎಂ) ಈ ಮಧ್ಯ ಪ್ರವೇಶ ಜೆಕೊಸ್ಲೊವಾಕಿಯಾದ ಕಾರ್ಮಿಕ ವರ್ಗ ಹಾಗೂ ಅಂತರ ರಾಷ್ಟ್ರೀಯ ಕಮ್ಯುನ್ನಿಸ್ಟ್ ಆಂದೋಲನಕ್ಕೆ ನೆರವಾಗುವ ಸರಿಯಾದ ಕ್ರಮ ಎಂದು ಹೇಳಿ ಸರಿಯಾದ ನಿಲುವು ತಳೆಯಿತು.

ವಾಸ್ತವ ಸಂಗತಿಯೇನೆಂದರೆ ಸಿ. ಪಿ. ಐ. (ಎಂ) ಎಂದೂ ಕಮ್ಯುನಿಸ್ಟ್ ಪಕ್ಷಗಳ 1957 ರ ಘೋಷಣೆ ಹಾಗೂ 1960 ರ ಹೇಳಿಕೆಯಿಂದ ದೂರಸರಿಯಲಿಲ್ಲ. ಸಮಾಜವಾದೀ ಬಣದ ಪಕ್ಷವಹಿಸುವುದರಲ್ಲಿ, ಅಮೇರಿಕನ್ ಸಾಮ್ರಾಜ್ಯಶಾಹಿಯನ್ನು ವಿರೋಧಿಸುವಲ್ಲಿ ಎಂದೂ ಹಿಂಜರಿಯಲಿಲ್ಲ. ಬೇರೆ ಕೆಲವರು ತಾತ್ಕಾಲಿಕವಾಗಿ ಈ ಅಂತರ ರಾಷ್ಟ್ರೀಯ ದಸ್ತಾವೇಜುಗಳ ನಿಲುವಿನಿಂದ ದೂರ ಸರಿದಾಗ ವಾಸ್ತವತೆ ಮತ್ತೆ ಸರಿಯಾದ ತಿಳುವಳಿಕೆಗೆ ವಾಪಸಾಗುವಂತೆ ಅವರಿಗೆ ಪಾಠ ಕಲಿಸಿತು.

ತನ್ನ ತಪ್ಪು ತಿಳುವಳಿಕೆಯಿಂದಾಗಿ ಸಿ. ಪಿ. ಐ. ತೀವ್ರ ಸೋಲನ್ನು ಅನುಭವಿಸುವಂತಾದಾಗಲೂ ತಮ್ಮದೇ ಸರಿಯಾದ ತಿಳುವಳಿಕೆ ಎಂದು ಸಿ. ಪಿ. ಐ. ಮುಖಂಡರು ಹೇಳಿಕೊಳ್ಳುತ್ತಿರುವುದು ನಿಜಕ್ಕೂ ತಮಾಷೆ. ಈ ಸಂಬಂಧದಲ್ಲಿ, 1957 ನವೆಂಬರ್‌ನ ಕಮ್ಯುನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳ ಘೋಷಣೆ ಹಾಗೂ 1960 ನವಂಬರ್‌ನ ಕಮ್ಯುನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳ ಪ್ರತಿನಿಧಿಗಳ ಸಭೆಯ ಹೇಳಿಕೆಗಳನ್ನು ಜಾಗತಿಕ ಕಮ್ಯುನಿಸ್ಟ್ ದಸ್ತಾವೇಜುಗಳೆಂದು ಸಿ. ಪಿ. ಐ. ಪರಿಗಣಿಸುತ್ತದೆಯೇ ಎಂದು ನಾವು ಕೇಳಬಯಸುತ್ತೇವೆ. ಇವೆರಡೂ ದಸ್ತಾವೇಜುಗಳು ಕಮ್ಯುನಿಸ್ಟ್ ಹಾಗೂ ಕಾರ್ಮಿಕವರ್ಗ ಆಂದೋಲನ ಬೆಳೆಯಬೇಕಾದರೆ ಎರಡು ರಂಗಗಳಲ್ಲಿ ಅಂದರೆ ಇನ್ನೂ ಮುಖ್ಯ ಅಪಾಯವಾಗಿಯೇ ಇರುವ ಪರಿಷ್ಕರಣ

ಐಕ್ಯಕಾರ್ಯಾಚರಣೆ-ಸ್ಪಷ್ಟನಿಲುವಿನ ಅಭಾವ

ವಾದದ ವಿರುದ್ಧ ಮತ್ತು ಪಂಥವಾದ ಹಾಗೂ ಕುರುಡು ಸೈದ್ಧಾಂತಿಕತೆಯ ವಿರುದ್ಧ ದೃಢ ಹೋರಾಟ ನಡೆಸಬೇಕಾಗಿದೆ ಎಂದು ಒತ್ತಿ ಹೇಳಿದ್ದವು.

ತಪ್ಪು ನಿಲುವು ಯಾರದು?

ಸದ್ಯದ ಪ್ರಶ್ನೆಗಳ ಬಗ್ಗೆಯೂ ಕೆಲವು ದುರದೃಷ್ಟಕಾರೀ ಹೇಳಿಕೆಗಳಿವೆ. ಅಕಾಲಿಗಳ "ಧರ್ಮಯುದ್ಧ" ಆಂದೋಲನವನ್ನು ತಾವು ವಿರೋಧಿಸಿದುದಾಗಿ, ಆದರೆ ಸಿ.ಪಿ.ಐ. (ಎಂ) ಆರಂಭದಲ್ಲಿ ಅದನ್ನು ಬೆಂಬಲಿಸಿದುದಾಗಿ ಹೇಳಲಾಗಿದೆ. ಸಿ. ಪಿ. ಐ. (ಎಂ) "ಧರ್ಮಯುದ್ಧ"ವನ್ನು ಎಂದೂ ಬೆಂಬಲಿಸಲಿಲ್ಲ, ಮಾತ್ರವಲ್ಲ ಸರಕಾರ ಅಕಾಲಿಗಳ ಧಾರ್ಮಿಕ ಬೇಡಿಕೆಗಳಿಗೆ ತಕ್ಷಣ ಒಪ್ಪಿಗೆ ನೀಡಿದಾಗ ಪ್ರಜಾಸತ್ತಾತ್ಮಕ ಬೇಡಿಕೆಗಳ ಬಗ್ಗೆ ಕಾಲಹರಣದ ನಿಲುವು ಕಳೆದು ಇಂತಹ ಬೇಡಿಕೆಗಳನ್ನು ಮಾತ್ರ ಒಪ್ಪಿಕೊಳ್ಳುವುದನ್ನು ಟೀಕಿಸಿತು. ಅಕಾಲಿ ಪಕ್ಷದ ಪ್ರಮುಖ ನಾಯಕತ್ವವನ್ನು ಹಾಗೂ ಧರ್ಮಾಂಧ ಪ್ರತ್ಯೇಕತಾವಾದಿಗಳನ್ನೂ ಬೇರೆ ಬೇರೆಯಾಗಿ ಕಂಡು, ಕೋಮುವಾದಿಗಳ ಒತ್ತಡಕ್ಕೆ ಬಲಿಯಾಗಬಾರದೆಂದು ಅಕಾಲಿ ನಾಯಕತ್ವವನ್ನು ಬಾರಿಬಾರಿಗೂ ಟೀಕಿಸುತ್ತಾ ಒಂದು ಸರಿಯಾದ ನಿಲುವು ತಳೆಯಿತು. ಇವು ಯಾರೂ ಅಲ್ಲಗಳೆಯಲಾಗದ ಸಂಗತಿಗಳು. ಭಾರತದ ಬಗ್ಗೆ ಏನೂ ತಿಳಿಯದವರಷ್ಟೆ ಸಿ.ಪಿ ಐ.ನ ಇಂತಹ ಕಳ್ಳದಾಳಿಗಳನ್ನು ಒಪ್ಪಿಯಾರು.

ವಾಸ್ತವವಾಗಿ ಇಂತಹ ತಪ್ಪು ನಿಲುವು ತಳೆದಿರುವುದು ಸಿ. ಪಿ. ಐ. ಮುಖಂಡತ್ವವೇ. ಅಸ್ಸಾಂನಲ್ಲಿ 1984 ರ ಆರಂಭದಿಂದ ಅದು ಎ. ಜಿ. ಪಿ. ಯತ್ತ ಸರಿಯಲಾರಂಭಿಸಿತು. ಅಸ್ಸಾಂನಲ್ಲಿ ಸಿ. ಪಿ. ಐ. (ಎಂ)ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘದ ಧೋರಣೆ ಸ್ವೀಕರಿಸಿದ್ದರಿಂದ ಕಲ್ಕತ್ತಾ ಸಮಾವೇಶದ ನಿರ್ಣಯಗಳನ್ನು ಜ್ಯಾರಿಗೊಳಿಸಲು ಅದು ನಿರಾಕರಿಸಿತು. 1971 ನ್ನು ಆರಂಭದ ವರ್ಷವೆಂದು ಪರಿಗಣಿಸಬೇಕಾಗಿ ಅಸ್ಸಾಮಿನ ಎಡ ಪಕ್ಷಗಳೆಲ್ಲಾ ಒಪ್ಪಿಕೊಂಡಿದ್ದವು. ಆದರೆ ನಂತರ ಚಳುವಳಿಗಾರರ ಕೃಪೆಗಳಿಸಲು ಸಿ. ಪಿ. ಐ. ಈ ನಿಲುವಿನಿಂದ ಹಿಂದೆ ಸರಿಯಲಾರಂಭಿಸಿತ್ತು, ಎ. ಜಿ. ಪಿ. ಯೊಂದಿಗೆ ಚುನಾವಣಾ ಮೈತ್ರಿಗೆ ಪ್ರಯತ್ನಿಸಿ ನಿರಾಕರಿಸಲ್ಪಟ್ಟಾಗ ಮಾತ್ರ ಅದು ಸಿ. ಪಿ. ಐ(ಎಂ) ಅಭ್ಯರ್ಥಿಗಳಿರುವಲ್ಲಿ ತಾನು ಸ್ಪರ್ಧಿಸುವುದಿಲ್ಲವೆಂದು ಹೇಳಿತು.

ಐಕ್ಯ ಕಾರ್ಯಾಚರಣೆ ಕುರಿತು

ಸಿ. ಪಿ ಐ (ಎಂ) ತನ್ನ ಪಂಥವಾದದಿಂದಾಗಿ ಜಂಟಿ ಕಾರ್ಯಾಚರಣೆಗಳಿಗೆ ವಿರೋಧಿ ಎಂಬ ಇನ್ನೊಂದು ಅಸ್ಪಷ್ಟ ಆಪಾದನೆಯಿದೆ. ಇದು ಇನ್ನೊಂದು ಹಾಸ್ಯಾಸ್ಪದ ಹೇಳಿಕೆ. ಸಿ. ಪಿ. ಐ ಮುಖಂಡರು ಸುಮಾರಾಗಿ ಕಾಂಗ್ರೆಸ್ ಬಣದಲ್ಲೇ ಇದ್ದು ಸಿ. ಪಿ ಐ. (ಎಂ) ಜೊತೆಗೆ ಐಕ್ಯ ಕಾರ್ಯಾಚರಣೆಗಿಂತ ಕಾಂಗ್ರೆಸ್‌ನೊಂದಿಗೆ ಐಕ್ಯತೆಯನ್ನೇ ಹೆಚ್ಚಾಗಿ ಬಯಸುತ್ತಿದ್ದ ಕಾಲದಲ್ಲಿ ಕೂಡಾ ಸಿ. ಪಿ. ಐ. (ಎಂ) ಐಕ್ಯ ಕಾರ್ಯಾಚರಣೆಯ ಮನ್ನಣೆ ಮಾಡುತ್ತ ಬಂದಿದೆ. ಈಗ ಸಿ ಐ. ಟಿ. ಯು ರಾಷ್ಟ್ರೀಯ ಆಂದೋಲನ ಸಮಿತಿಯಲ್ಲಿ ಈ ಸಾಮೂಹಿಕ ಕಾರ್ಯಾಚರಣೆ ಸಂಘಟಿಸುವಲ್ಲಿ ಮಹತ್ವ ಪಾತ್ರವಹಿಸುತ್ತಿದೆ. ಎನ್. ಟಿ. ಆರ್ ಮಂತ್ರಿಮಂಡಲದ ವಜಾದ ವಿರುದ್ಧ ಬಂದ್ ಆಚರಿಸಲು ಕರೆನೀಡಲು ಹಲವು ಕೇಂದ್ರೀಯ ಕಾರ್ಮಿಕ ಸಂಘಗಳ ಪೂರ್ಣ ಸಹಕಾರ ಸಿಗದೇ ಇದ್ದ ಸಂದರ್ಭದಲ್ಲಿ ಸಮಿತಿ ಬಂದ್‌ಗೆ ಕರೆನೀಡುವಂತೆ ಅವಕಾಶ ನೀಡಿದ್ದು ಸಿ. ಐ. ಟಿ. ಯು ನ ಪ್ರಯತ್ನದಿಂದಾಗಿ ಎಂಬುದನ್ನು ಗಮನಿಸಬೇಕು. ಇದೇ ರೀತಿ ಎಸ್. ಎಫ್. ಐ., ಡಿ. ವೈ. ಎಫ್. ಐ. ಮತ್ತಿತರ ಸಂಘಟನೆಗಳು ಐಕ್ಯ ಕಾರ್ಯಾಚರಣೆಗೆ ಪ್ರಯತ್ನ ನಡೆಸುತ್ತಾ ಬರುತ್ತಿವೆ. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಬಗ್ಗೆ ಸಿ. ಪಿ. ಐ ಮುಖಂಡರ ನಿಲುವು ತಪ್ಪು ಮಾತ್ರವಲ್ಲ ಛಿದ್ರಕಾರಿ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಎ. ಐ. ಟಿ. ಯು. ಸಿ. ಐಕ್ಯತೆಯ ಆಹ್ವಾನ ನೀಡಿತು ಎಂಬುದು ಅರೆಸುಳ್ಳು. ಎ. ಐ. ಟಿ. ಯು. ಸಿ. ಯ ಅಧಿವೇಶನದಲ್ಲಿ ಸೌಹಾರ್ದ ಪ್ರತಿನಿಧಿಯಾಗಿದ್ದ ಸಮರ್ ಮುಖರ್ಜಿಯವರಿಗೆ ಈ ಬಗ್ಗೆ ಏನೂ ಹೇಳಲಾಗಿಲ್ಲ.

ತದ್ವಿರುದ್ಧವಾಗಿ ಸುಮಾರು ಎಂಟು ವರ್ಷಗಳ ಹಿಂದೆ ಸಿ. ಐ. ಟಿ. ಯು.ನೇ ಕೇಂದ್ರ ಕಾರ್ಮಿಕ ಸಂಘಗಳ ಮಹಾಸಂಘ ಸ್ಥಾಪಿಸಿಕೊಳ್ಳಬೇಕೆಂದು ಆಹ್ವಾನ ನೀಡಿತ್ತು. ಈ ಪ್ರಸ್ತಾಪವನ್ನು ಸಿ. ಐ. ಟಿ. ಯು ಅಧಿವೇಶನಕ್ಕೆ ಸೌಹಾರ್ದ ಪ್ರತಿನಿಧಿಯಾಗಿ ಬಂದ ಇಂದ್ರಜಿತ್ ಗುಪ್ತ ಹಗುರ ಆಕ್ಷೇಪಗಳನ್ನೆತ್ತಿ ತಳ್ಳಿಹಾಕಿದರು.

ಶಾಂತಿಯಂತಹ ಮಹತ್ವದ ವಿಚಾರದಲ್ಲೂ ಇದೇ ಕಥೆ. ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದ ಸಂಘಟನೆಯ ಕಾರ್ಯನಿರ್ವಹಣೆಯನ್ನು ಪ್ರಜಾಸತ್ತಾತ್ಮಕಗೊಳಿಸುವಲ್ಲಿ ನೆರವಾಗಲು ಸಿ. ಪಿ. ಐ. ಮುಖಂಡತ್ವ ನಿರಾಕರಿಸುತ್ತಿದೆ. ಇಲ್ಲಿನ ಶಾಂತಿ ಚಳುವಳಿ ಜಗತ್ತಿನಲ್ಲಿ ಅತ್ಯಂತ ದುರ್ಬಲ ಚಳುವಳಿಯಾಗಿದ್ದರೂ ಸಿ. ಪಿ. ಐ ಗೆ ಆ ಬಗ್ಗೆ ಕಾಳಜಿಯಿಲ್ಲ.

ಎರಡು ಪಕ್ಷಗಳ ಕೇಂದ್ರೀಯ ಸಮನ್ವಯ ಸಮಿತಿಯ ಬಗ್ಗೆ ಜನತೆಯ ಮುಂದೆ ಎಲ್ಲಾ ವಾಸ್ತವಾಂಶಗಳನ್ನು ಇಟ್ಟಿಲ್ಲ. ಲೋಕಸಭಾ ಚುನಾವಣೆಯ ಕಾಲದಲ್ಲಿ ಒಂದು ಸ್ಥಾನ ಎರಡು ಪಕ್ಷಗಳ ನಡುವೆ ವಿವಾದದ ವಿಷಯವಾದಾಗ ಈ ಸಮಿತಿಯ ಸಭೆ ಕರೆಯಲು ಸಿ. ಪಿ. ಐ. ಮುಖಂಡತ್ವ ನೇರವಾಗಿ ನಿರಾಕರಿಸಿ, ಆ ಋವ ಕಾಂಗ್ರೆಸ್‌ನ ಅಭ್ಯರ್ಥಿ ಗೆಲ್ಲುವಂತಾಗಿ, ಸಿ. ಪಿ. ಐ (ಎಂ)ಗೆ ಸಿ. ಪಿ. ಐ. ಗಿಂತ ಹಲವು ಸಾವಿರ ಹೆಚ್ಚಿನ ಮತಗಳು ದೊರೆತಿರುವಾಗ ರಾಜ್ಯ ಸಮನ್ವಯ ಸಮಿತಿಗಳ ಬಗ್ಗೆ ಎರಡು ಪಕ್ಷಗಳ ವಿಲೀನದ ಬಗ್ಗೆ ಒತ್ತಾಯಿಸುವುದು ಪ್ರಾಮಾಣಿಕತನವೇ ?

ರಾಜಕೀಯ ಘೋಷಣೆಗಳು ಸದ್ಯದ ವಾಸ್ತವತೆಗೆ ತಕ್ಕಂತಿರಬೇಕು. ಅದನ್ನು ಸದ್ಯದ ಆಚರಣೆಗಳನ್ನು ಮರೆಮಾಚಲು ಬಳಸಬಾರದು.

ಹಿಂಜರಿಕೆ ಬೇಡ

ಸಿ. ಪಿ. ಐ ನ ನಿರ್ಣಯದ ಪ್ರಮುಖ ರಾಜಕೀಯ ನಿರೂಪಣೆಗಳು ಎಡ ಐಕ್ಯತೆಯನ್ನು ಬಲಯುತಗೊಳಿಸುವಂತಹದುದಾದರೂ ಸಿ. ಪಿ. ಐ. (ಎಂ) ನ ವಿರುದ್ಧ ಮಾಡಿರುವ ತಪ್ಪು ಆಪಾದನೆಗಳು ಅದೇ ಐಕ್ಯತೆಯನ್ನು ಬುಡಮೇಲು ಮಾಡುತ್ತಿವೆ ಈ ಹೇಳಿಕೆಗಳ ಸತ್ಯಾಸತ್ಯತೆಯ ಬಗ್ಗೆ ತಿಳಿದಿರುವ ಸಿ. ಪಿ ಐ. (ಎಂ)ನ ಕಾರ್ಯಕರ್ತರ ಮೇಲೆ ಇಂತಹ ಬೇಜವಾಬ್ದಾರಿ ಹೇಳಿಕೆಗಳು ಯಾವ ರೀತಿಯ ಕಾಲಹರಣಕಾರೀ ಪ್ರಭಾವ ಬೀರಬಹುದೆಂದು ಸಿ. ಪಿ. ಐ. ಮುಖಂಡರಿಗೆ ತಿಳಿಯುವುದಿಲ್ಲವೇ ?

ಸಿ. ಪಿ. ಐ, (ಎಂ) ನಿಂದ ವರ್ಷಾನುಗಟ್ಟಲೆ ದೂರವಿದ್ದು, ವರ್ಷಾನುಗಟ್ಟಲೆಯ ಸಂಶಯ ಪ್ರವೃತ್ತಿಯಿಂದ ಉಂಟಾಗಿರುವ ಒಂದು ರೀತಿಯ ಮಾನಸಿಕತೆಯಿಂದಾಗಿ ಪರಿಸ್ಥಿತಿಯನ್ನು ಸಮತೂಕದ ಹಾಗೂ ವಸ್ತುನಿಷ್ಠ ದೃಷ್ಟಿಯಿಂದ ನೋಡಲು, ತಮ್ಮ ತಪ್ಪುಗಳನ್ನು ಅಂದಾಜು ಮಾಡಿ, ಹಳೆಯ ಧೂಳನ್ನು ಜಾಡಿಸಲು ಸಿ. ಪಿ. ಐ. ಮುಖಂಡರಿಗೆ ಖಂಡಿತಾ ಕಷ್ಟವಾಗುತ್ತದೆ. ಇವೆಲ್ಲಾ ವ್ಯಕ್ತಿನಿಷ್ಠ ಮಾನಸಿಕತೆಯ ಫಲಗಳು ಎಂಬುದು ನಮಗೆ ಅರ್ಥವಾಗುತ್ತದೆ.

ಸಿ. ಪಿ. ಐ (ಎಂ) ಅಂತೂ ಎಡ ಐಕ್ಯಯತೆ ನೀತಿ ಅನುಸರಿಸಲು ಗರಿಷ್ಠ ತಾಳ್ಮೆ ಹಾಗೂ ಸಹನೆ ತೋರಲು ಸಿದ್ಧವಾಗಿದೆ. ಚಿತ್ರವಿಚಿತ್ರ ಆಪಾದನೆಗಳನ್ನು ಕೇಳಿ-ಕೇಳಿ ಅಭ್ಯಾಸವಾಗಿ ಹೋಗಿರುವುದರಿಂದ ಇಂತಹ ಆಪಾದನೆಗಳನ್ನು ಅವು ಎಡ ಐಕ್ಯತೆಯ ದಾರಿಯಲ್ಲಿ ಇರುವ ತೊಂದರೆಗಳೆಂದು ಪರಿಗಣಿಸುತ್ತದೆಯಷ್ಟೆ. ಈ ಪರಿಸ್ಥಿತಿಯನ್ನು ಮೀರಿ ನಿಲ್ಲುವಂತಾಗಬೇಕಾದರೆ ಎಷ್ಟೇ ಕಷ್ಟವಾದರೂ ಎಡ ಐಕ್ಯತೆಗೆ ಬದ್ಧವಾಗಿರುವುದು ಅಗತ್ಯ ಎಂದು ಅದು ಪರಿಗಣಿಸುತ್ತದೆ. ನಮ್ಮ ತಕ್ಷಣದ ಪ್ರಶ್ನೆಗಳ ಬಗ್ಗ ಗಮನ ಕೇಂದ್ರೀಕರಿಸಿ ಪರಸ್ಪರರ ಆಚರಣೆಯ ಆಧಾರದ ಮೇಲೆ ಪರಸ್ಪರರ ಬಗ್ಗೆ ತೀರ್ಮಾನಕ್ಕೆ ಬರಬೇಕೆಂಬುದು ಸಿ ಪಿ ಐ ಮುಖಂಡರಿಗೆ ನಮ್ಮ ಸಲಹೆ. ತಮ್ಮ ಭೂತಕಾಲದಿಂದ ತಮ್ಮನ್ನು ಪೂರ್ಣವಾಗಿ ಪ್ರತ್ಯೇಕಿಸಿಕೊಳ್ಳುವುದು ಈ ಎರಡರಲ್ಲಿ ಯಾವ ಪಕ್ಷಕ್ಕೂ ಸಾಧ್ಯವಿಲ್ಲ. ಸೈದ್ಧಾಂತಿಕ ಪ್ರಶ್ನೆಗಳು ಮತ್ತೆ-ಮತ್ತೆ ಖಂಡಿತಾ ಉದ್ಭವಗೊಳ್ಳುತ್ತವೆ. ಅದನ್ನು ಎದುರಿಸುವಲ್ಲಿ ಯಾವ ಹಿಂಜರಿಕೆಯೂ ಇರಬಾರದು.

ಎಡರಂಗ ಸರಕಾರಕ್ಕೆ ಭವ್ಯಭವಿಷ್ಯವಿದೆ

—ಜ್ಯೋತಿ ಬಸು

"ಮುಂಬರುವ ಚುನಾವಣೆಯಲ್ಲಿ ಎಡರಂಗ ಸರಕಾರವನ್ನು ಬಂಗಾಲ ಕೊಲ್ಲಿಗೆ ಎಸೆಯಲಾಗುವುದು" ಎಂಬ ಕೆಲವು ಕಾಂಗ್ರೆಸ್‌ ಮುಖಂಡರ ಜಂಭದ ಹೇಳಿಕೆಯನ್ನು ಪಶ್ಚಿಮ ಬಂಗಾಲದ ಮುಖ್ಯಮಂತ್ರಿಯಾದ ಜ್ಯೋತಿಬಸು ಅವರು ಸ್ಪಷ್ಟವಾಗಿ ಅಸಾಧ್ಯದ ಜಂಭವೆಂದು ಹೇಳಿದ್ದಾರೆ.

ಭುವನೇಶ್ವರದಲ್ಲಿ ಮೇ ದಿನಾಚರಣೆಯ ಸಂಬಂಧ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಪಶ್ಚಿಮ ಬಂಗಾಲದ ಜನರ ಮಧ್ಯೆ ಆಳವಾಗಿ ಬೇರೂರಿರುವ ಎಡರಂಗ ಸರಕಾರವನ್ನು ಕಿತ್ತೊಗೆಯುವುದು ಸುಲಭವಲ್ಲವೆಂದು ಹೇಳಿದ್ದಾರೆ.

ಆರ್ಥಿಕ ಬೇಡಿಕೆಗಳನ್ನು ಪಡೆಯುವ ಸಲುವಾಗಿ ತಮ್ಮ ಸಂಯುಕ್ತ ಚಳುವಳಿಯನ್ನು ಮುಂದುವರಿಸುತ್ತಿದ್ದಂತೆಯೇ ತಮ್ಮ ಕೊನೆ ಗುರಿ ಯಾವುದೆಂದರೆ ಸರಕಾರ ನಡೆಸುವ ಅಧಿಕಾರ ವಶಪಡಿಸಿಕೊಳ್ಳುವುದಾಗಿದೆಂಬುದನ್ನು ಮರೆಯಬಾರದೆಂದು ನೆನಪಿಸಿಕೊಟ್ಟರು.

ಜನರನ್ನು ಮೋಸಗೊಳಿಸಲು ಸಮತಾವಾದದ ಹೆಸರು ಹೇಳುತ್ತಿರುವ ಕಾಂಗ್ರೆ ಧೋರಣೆಗಳ ವಿರುದ್ಧ ಸತತ ಹೋರಾಟ ಮುಂದುವರಿಸಬೇಕೆಂದು ಕಾರ್ಮಿಕ ವರ್ಗಕ್ಕೆ ಕರೆ ನೀಡಿದರು.

"ಯಾವ ಸಮತಾವಾದಿ ದೇಶದಲ್ಲಿ ಗುತ್ತೇದಾರಿ ಮನೆತನಗಳಿಗೆ ಪ್ರಾಧಾನ್ಯತೆಕೊಡಲಾಗಿದೆ, ಶೇ 60ರಷ್ಟು ನಿರಕ್ಷರಿಗಳಿದ್ದಾರೆ, ಬೆಲೆಗಳು ಗಗನಕ್ಕೇರುತ್ತಿವೆ, ಜನರನ್ನು ವಿಚಾರಣೆಯಿಲ್ಲದೆ ಸ್ಥಾನಬದ್ಧತೆಯಲ್ಲಿಡಲಾಗುತ್ತಿದೆ? ಎಂಬ ಸವಾಲು ಹಾಕಿದರು. ಕಮ್ಯುನಿಸ್ಟ್ ಮತ್ತು ಇತರ ಎಡ ಪಕ್ಷಗಳ ಮುಖಂಡರನ್ನು ವಿಚಾರಣೆಯಿಲ್ಲದೆ ಕಾಂಗ್ರೆ ಆಳ್ವಿಕೆಯಲ್ಲಿ ಬಂಧನದಲ್ಲಿಟ್ಟಿದ್ದರೂ ಕೂಡ, ಕಾಂಗ್ರೆಸ್ಸಿನಲ್ಲಿ ನೂರಾರು ಗುಂಡಾ ಜನರಿದ್ದರೂ ಕೂಡ ಕಳೆದ 8 ವರ್ಷಗಳಲ್ಲಿ ಪ. ಬಂಗಾಲದ ಎಡರಂಗ ಸರಕಾರ ಯಾವೊಬ್ಬ ಕಾಂಗ್ರೆಸ್ ಮುಖಂಡನನ್ನೂ ವಿಚಾರಣೆಯಿಲ್ಲದೆ ಬಂಧನದಲ್ಲಿಟ್ಟಿಲ್ಲವೆಂದು ಸಾರಿದರು. ತನ್ನ ರಾಜ್ಯದಲ್ಲಿ ಜಾತೀಯ ದಂಗೆ ಎಬ್ಬಿಸಲು, ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹ ನೀಡಲು ಸತತ ಪ್ರಯತ್ನಗಳು ನಡೆದರೂ ಕೂಡ ಅವುಗಳನ್ನೆದುರಿಸಲು ತನ್ನ ಸರಕಾರ ದೃಢವಾದ ಕ್ರಮ ಕೈಗೊಂಡಿದೆ ಎಂದೂ, ಆದರೆ ಬರೇ ಪೋಲೀಸರ ಕ್ರಮದಿಂದ ಮಾತ್ರ ಜಾತೀಯ ಭಯೋತ್ಪಾದಕ ಶಕ್ತಿಗಳನ್ನು ನಿರ್ನಾಮ ಮಾಡಲು ಸಾಧ್ಯವಿಲ್ಲೆಂದೂ ಜನರ ತಿಳುವಳಿಕೆಯನ್ನು ಮೇಲ್ಮಟ್ಟಕ್ಕೆ ತರುವುದು ಅಗತ್ಯವೆಂದೂ ಹೇಳಿದರು.

ವಿಜೃಂಭಣೆಯ ಮೇ ಶತಮಾನೋತ್ಸವ ಆಚರಣೆ

(೩ನೇ ಪುಟದಿಂದ)

ನಾಯಕ ವಾಸುಗಟ್ಟಿ ಸ್ವಾಗತಿಸಿದರು. ಸಭಾಧ್ಯಕ್ಷತೆಯನ್ನು ಎ. ಐ. ಟಿ. ಯು. ಸಿ. ಮುಖಂಡ ವಿಶ್ವನಾಥನಾಯಕ್ ವಹಿಸಿದರು.

ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸೆಕ್ರೆಟರಿಯೆಟ್ ಸದಸ್ಯ ಕೆ.ಆರ್. ಶ್ರೀಯಾನ್ ಮಾತನಾಡಿ ಭಾರತದ ಜನತೆಯ ಪ್ರತಿಯೊಂದು ವಿಭಾಗವೂ ಇಂದು ರಾಜೀವ್ ಸರಕಾರದ ಅಕ್ರಮಣಕ್ಕೆ ಒಳಗಾಗಿದೆ. ವಿಶ್ವ ಬ್ಯಾಂಕು ಐ. ಎಂ. ಎಫ್ ಗಳ ಒತ್ತಡಕ್ಕೆ ಮಣಿದು ಕೈಗೊಂಡಿರುವ ಆರ್ಥಿಕ ನೀತಿಯಿಂದ ದೇಶದ ಸ್ವಾತಂತ್ರ ಮತ್ತು ಸ್ವಾವಲಂಭನೆಗೆ ಗಂಡಾಂತರ ಬಂದಿದೆ ಎಂದು ಟೀಕಿಸಿದರು.

ಹಿರಿಯ ಕಾರ್ಮಿಕ ನಾಯಕರಾದ ಬಿ. ವಿ. ಕಕ್ಕಿಲಾಯರು ಸಭೆಯನ್ನು ಉದ್ದೇಶಿಸಿ ಮಾತನಾಡಿ ಮೇ ದಿನದ ಅಂತರ್ರಾಷ್ಟ್ರೀಯತೆಯ ಸ್ಪೂರ್ತಿಯಿಂದ ವಿಶಾಲ ಪ್ರಮಾಣದ ಐಕ್ಯತೆಯನ್ನು ಸಾಧಿಸಿ, ರಾಜೀವ್ ಸರಕಾರದ ಜನವಿರೋಧಿ ಆರ್ಥಿಕ ನೀತಿಯನ್ನು ಪ್ರತಿಭಟಿಸಿ ಹೋರಾಟಲು ಕರೆ ನೀಡಿದರು ಶೋಷಣೆ ರಹಿತವಾದ ಸಮಾಜವನ್ನು ನಿರ್ಮಾಣ ಮಾಡಲು ಕಾರ್ಮಿಕ ವರ್ಗಕ್ಕೆ ಸಾಧ್ಯವಿದೆ ಎಂದು ಮೇ ದಿನದ ಸಂದೇಶ ತೋರಿಸಿಕೊಟ್ಟಿದೆ ಎಂದು ತಿಳಿಸಿ, ಭಾರತದಲ್ಲೂ ಬಂಡವಾಳಶಾಹೀ ಪ್ರಭುತ್ವವನ್ನು ಕಿತ್ತೊಗೆಯಲು ಕಾರ್ಮಿಕ ವರ್ಗಕ್ಕೆ ವರ್ಗ ರಾಜಕೀಯ ಬೇಕೆಂದು ಒತ್ತಿ ಹೇಳಿದರು.

ನೂರು ವರ್ಷಗಳ ಮೊದಲು ಅಮೇರಿಕದ ಚಿಕಾಗೋ ನಗರದ ಕಾರ್ಮಿಕರ ಹೋರಾಟದಿಂದ ಮೊಳಗಿದ ಮೇ ದಿನದ ಸಂದೇಶವು ಜಗತ್ತಿನ ಮೂರನೇ ಒಂದಂಶ ಭೂ ಭಾಗವನ್ನು ಬಂಡವಾಳಶಾಹಿಗಳಿಂದ ಕಾರ್ಮಿಕ ವರ್ಗವು ವಿಮೋಚನೆಗೊಳಿಸಿ ಸುಲಿಗೆ, ಶೋಷಣೆ ಇಲ್ಲದ ನವ ಸಮಾಜವನ್ನು ಕಟ್ಟಿ ಇತರ ಪ್ರಜಾ ಪ್ರಭುತ್ವವಾದೀ ಜನ ವಿಭಾಗದ ವಿಸ್ತಾರವಾದ ಐಕ್ಯತೆಯನ್ನು ಬೆಳೆಸುವುದರೊಂದಿಗೆ ಶಿಸ್ತು ಮತ್ತು ತತ್ವಬದ್ಧವಾದ ಹೋರಾಟದಿಂದ ಭಾರತದ ಆಳುವ ಜಮೀನ್ದಾರಿ ಬಂಡವಾಳಶಾಹೀ ವರ್ಗದ ಆಡಳಿತವನ್ನು ಸೋಲಿಸಬೇಕೆಂದು ಕರೆ ನೀಡಿದರು.

ಕೊನೆಗೆ ಶ್ರೀ ಕೆ. ಆನಂದ ವಂದಿಸಿದರು.

ಮಂಗಳೂರು

ಸಾವಿರಾರು ಕೆಲಸಗಾರರ ಉತ್ಸಾಹ ತುಂಬಿದ ಮೆರವಣಿಗೆಯಲ್ಲಿ ನೂರಾರು ಮಹಿಳಾ ಕಾರ್ಮಿಕರು ಪಾಲ್ಗೊಂಡಿದ್ದು, ಕೇಂದ್ರ ಮೈದಾನಿನಲ್ಲಿ ನಡೆಸಿ ಸಾರ್ವಜನಿಕ ಸಭೆಯಲ್ಲಿ ಸಿ ಐ ಟಿ ಯು ಮುಖಂಡರಾದ ಪಿ. ರಾಮಚಂದ್ರರಾವ್, ಮೂಸಬ್ಬ ಹಾಗೆಯೇ ಇತರ ಕಾರ್ಮಿಕ ಸಂಘಟನೆಗಳ ಮುಖಂಡರೆಲ್ಲ ಭಾಷಣಮಾಡಿ ಮೇ ದಿನದ ಮಹತ್ವ ತಿಳಿಸಿ ಹೇಳಿದರು.

ದಾಂಡೇಲಿ

1986 ಮೇ ಒಂದನೇ ತಾರೀಕಿನಂದು ಮೇ ದಿನದ ಶತಮಾನೋತ್ಸವದ ಅಂಗವಾಗಿ ಪೇಪರ್ ಮಿಲ್ ಎಂಪ್ಲೋಯ್ಸ ಯೂನಿಯನ್, ಇಎಮ್‌ಡಬ್ಲ್ಯು ಎಂಪ್ಲೋಯ್ಸ ಯೂನಿಯನ್, ಹಾಗೂ ಪ್ಲಾಯವುಡ್ ಎಂಪ್ಲೋಯ್ಸ ಯೂನಿಯನ್ (ಸಿಐಟಿಯು) ಆಫೀಸುಗಳನ್ನು ಕೆಂಪು ಬಾವುಟಗಳಿಂದ ಹಾಗೂ ವಿದ್ಯುದ್ದೀಪಗಳಿಂದ ಶ್ರಂಗರಿಸಿದ್ದರು. ಹಾಗೂ ದಾಂಡೇಲಿಯ ಪ್ರಮುಖ ಬೀದಿಗಳನ್ನು ಕೆಂಪು ಧ್ವಜಗಳಿಂದ ಶ್ರಂಗರಿಸಿದ್ದರು. ಬೆಳಿಗ್ಗೆ 10 ಘಂಟೆಗೆ ಈ ಮೇಲಿನ ಮೂರೂ ಯೂನಿಯನ್ ಆಫೀಸುಗಳ ಎದುರುಗಡೆ ಸಿ.ಐ.ಟಿ.ಯು. ಧ್ವಜಗಳ ಧ್ವಜಾರೋಹಣ ನಡೆಯಿತು. ದಾಂಡೇಲಿಯಲ್ಲಿ ಸಾವಿರಾರು ಸಿ.ಐ.ಟಿ.ಯು. ಕಾರ್ಮಿಕರು ತಮ್ಮ ತಮ್ಮ ಮನೆಯ ಮೇಲ್ಗಡೆ ಕೆಂಪು ಬಾವುಟ ಹಚ್ಚಿದ್ದರು

ಸಂಜೆ 5 ಗಂಟೆಗೆ ಸಿ. ಎಮ್. ಸಿ. ಮೈದಾನದಿಂದ ಮೆರವಣಿಗೆಯಲ್ಲಿ ದಾಂಡೇಲಿಯ ಮೂರೂ ಕಾರಖಾನೆಯ ಕಾರ್ಮಿಕರು ಬ್ಯಾಂಕ, ಮುನ್ಸಿಪಲ್ ಕೆಲಸಗಾರರು ಭಾಗವಹಿಸಿದ್ದರು. ಮೆರವಣಿಗೆಯ ಮುಂದುಗಡೆ ಕೆಂಪು ಸಮವಸ್ತ್ರ ಧರಿಸಿದ ಸಿ.ಐ.ಟಿ.ಯು. ಕಾರ್ಯಕರ್ತರು ಮೆರವಣಿಗೆಯ ನೇತೃತ್ವವನ್ನು ವಹಿಸಿದ್ದರು. ಮೆರವಣಿಗೆಯಲ್ಲಿ ಕಾರ್ಮಿಕರು "ಯುದ್ಧ ಬೇಡ ಶಾಂತಿ ಬೇಕು, ಯುದ್ಧ ಖೋರ ಅಮೇರಿಕಾದ ರೀಗನ್ನನಿಗೆ ಧಿಕ್ಕಾರ !, ಮೇ ಶತಮಾನೋತ್ಸವಕ್ಕೆ ಜಯವಾಗಲಿ, ಜಗತ್ತಿನ ಕಾರ್ಮಿಕರೇ ಒಂದಾಗಿ" ಹೀಗೆ ಹಲವಾರು ಘೋಷಣೆಗಳನ್ನು ಕೂಗುತ್ತಾ ದಾಂಡೇಲಿಯ ಪ್ರಮುಖ ಬೀದಿಗಳಲ್ಲಿ ಸುತ್ತಾಡಿ ಸಂಡೇಮೈಧಾನದಲ್ಲಿ ಸಭೆ ಸೇರಿದರು.

ಟಿ. ಟಿ. ನಾಯ್ಕರವರು ಸ್ವಾಗತ ಭಾಷಣ ಮಾಡಿ ವಿ.ಜೆ.ಕೆ. ನಾಯರ ಅವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಬ್ಯಾಂಕ್ ನೌಕರ ಸಂಘದ ಶ್ರೀವಾಸ್ತವ ಮುನ್ಸಿಪಲ್ ಕಾರ್ಮಿಕರ ಸಂಘದ ಅಧ್ಯಕ್ಷರಾದ ಪಟಗಾರ ಹಾಗೂ ನಗರ ಸಭೆಯ ಅಧ್ಯಕ್ಷರಾದ ಕಾ. ಟಿ. ಎಸ್. ನಾಯ್ಕರವರು ಭಾಷಣಮಾಡಿ ಮೇ ಶತಮಾನೋತ್ಸವದ ಮಹತ್ವವನ್ನು ತಿಳಿಸಿದರು. ಕೊನೆಗೆ ಕಾ|| ವಿ.ಜೆ.ಕೆ. ನಾಯರವರು ಮಾತನಾಡಿ ಮೇ ದಿನವನ್ನು ನಾವು ಯಾಕೆ ಆಚರಿಸುತ್ತೇವೆ. ಮೇ ದಿನದ ಮಹತ್ವವೇನು ಈ ವರ್ಷ ಮೇ ಶತಮಾನೋತ್ಸವವನ್ನು ಆಚರಿಸುವ ನಮ್ಮ ಮುಂದೆ ಇರುವ ಜವಾಬ್ದಾರಿ, ಜಗತ್ತಿನಲ್ಲಿ ಶಾಂತಿ ನೆಲೆಸುವ ಬಗ್ಗೆ ಜಗತ್ತಿನ ಕಾರ್ಮಿಕರ ಜವಾಬ್ದಾರಿ, ಜಗತ್ತಿನಲ್ಲಿ ಮೂರನೇ ಮಹಾ ಯುದ್ಧ ನಡೆಸಿ ಸಮಾಜವಾದಿ ಬಣವನ್ನೇ ನಾಶ ಮಾಡಲು ಹೊರಟಿರುವ ಅಮೇರಿಕಾದ ಅಧ್ಯಕ್ಷ ರೀಗನ್ನಿನ ಹೊಂಚು, ಜಗತ್ತಿನಲ್ಲಿ ಮೂರನೇ ಮಹಾಯುದ್ಧವನ್ನು ತಡೆಗಟ್ಟಿ ಶಾಂತಿ ನೆಲೆಸಬೇಕೆನ್ನುವಲ್ಲಿ ಸಮಾಜವಾದಿ ರಶ್ಯಾದೇಶದ ಮಹತ್ವದ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ಶ್ರೀ|| ಹರೀಶನಾಯ್ಕರವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಬಿಜಾಪುರ

ನೂಲಿನ ಗಿರಣಿ, ನಗರಸಭೆ ಕೆಲಸಗಾರರು, ಕೃಷಿ ಕಾರ್ಮಿಕರೆಲ್ಲ ಸೇರಿ ಉತ್ಸಾಹದಿಂದ ಮೇ ದಿನಾಚರಣೆ ಆಚರಿಸಿದರು. ನಗರವೆಲ್ಲ ಕೆಂಬಾವುಟದಿಂದ ರಂಜಿಸುತ್ತಿತ್ತು. ಮುಂಜಾನೆ ಬೃಹತ್ ಮೆರವಣಿಗೆ, ಸಂಜೆ ಸಾರ್ವಜನಿಕ ಸಭೆ ನಡೆಯಿತು.ವಿ.ಎಂ ಸೊನ್ನದ್ ಭೀಮಸಿ ಕಲಾದಗಿ, ಲಾಯದಗುಂದಿ ಮೊದಲಾದವರು ಭಾಷಣ ಮಾಡಿದರು.

ವಾಮಂಜೂರ

ದಿನಾಂಕ 4-5-1986 ರಂದು ವಾಮಂಜೂರ ಕೆತ್ತಿಕಲ್ಲಿನಲ್ಲಿ ಮೇ ದಿನದ ಶತಮಾನೋತ್ಸವನ್ನು ಅಮೇರಿಕನ್ ಸಾಮ್ರಾಜ್ಯಶಾಹಿ ರೇಗನ್ನನ ಪ್ರತಿಮೆಯನ್ನು ದಹನ ಮಾಡುವುದರೊಂದಿಗೆ ಶತಮಾನೋತ್ಸವ ಕಾರ್ಯಕ್ರಮ ಪ್ರಾರಂಭವಾಯಿತು. ಬೆಳಿಗ್ಗೆ 7-30ಕ್ಕೆ ಧ್ವಜಾರೋಹಣವನ್ನು ಕಾಂತಿಮ್ಮಯ್ಯ ಅಜಾರಿ ಮಾಡಿದರು.

ವಾಮಂಜೂರು ಬೀಡಿ ಸಂಘದ ಕಾರ್ಯದರ್ಶಿ ಗಂಗಯ್ಯಅಮೀನ್‌ಸ್ವಾಗತ ಮಾಡಿದರು. ಬಳಿಕ ಗುರುಪುರದ ಅನ್ನುಮಾಸ್ಟರ್, ಡಿ. ವೈ. ಎಫ್. ಐ ಪರವಾಗಿ ಶಿವಾನಂದ ಕೋಡಿ, ರೈತ ಸಂಘದ ರಾಮಚಂದ್ರ ಉಚ್ಚಿಲ, ಎಸ್ ಎಫ್. ಐ. ಪರವಾಗಿ ಸುನಿಲ್ ನಾಟೇಕರ್ ಮಾತನಾಡಿ ಮೇ ದಿನದ ಶತಮಾನೋತ್ಸವದ ಅಂತರರಾಷ್ಟ್ರೀಯ ಕರೆಯನ್ನು ಗ್ರಾಮ ಗ್ರಾಮಗಳಿಗೆ ತೆಗೆದುಕೊಂಡು ಹೋಗುವ ಮೂಲಕ ಯಶಸ್ವಿ ಮಾಡಬೇಕೆಂದು ಕರೆ ನೀಡಿದರು.ಬಳಿಕ ಸಿಪಿಐ (ಎಂ) ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಮಾತನಾಡುತ್ತಾ ಗುಲಾಮಗಿರಿಯ ನೊಗದಿಂದ ಹೊರ ಬಂದು ಕಾರ್ಮಿಕ ವರ್ಗ "8 ಗಂಟೆ ಕೆಲಸ" ಘೋಷಣೆ ಮಾಡಿ ಹೋರಾಡಿ ರಕ್ತಸುರಿಸಿ, ಜೀವ ತೆತ್ತುದನ್ನು ವಿವರಿಸಿ ಈ ರೀತಿಯ ನೂರು ವರ್ಷದ ದೀರ್ಘ ಕಾಲದ ಚಾರಿತ್ರಿಕ ಹೋರಾಟದ ಪರಿಣಾಮದಿಂದಲೇ ಇಂದು ಜಗತ್ತಿನ 1/3 ಭಾಗದಲ್ಲಿ ಸಮಾಜವಾದಿ ವ್ಯವಸ್ಥೆ ಸ್ಥಾಪನೆಯಾಗಿದೆ ಎಂದು ಹೇಳಿದರು. ಎಲ್ಲಿಯವರೆಗೆ ನಿರುದ್ಯೋಗ, ಬಡತನ; ನಿವಾರಣೆ ಸಾಧ್ಯವಿಲ್ಲ ಎಂದು ಹೇಳುತ್ತಾ ನಮ್ಮನ್ನು ಆಳುತ್ತಿರುವ ಬಂಡವಾಳಶಾಹಿ ಭೂಮಾಲಿಕ ವರ್ಗವನ್ನು ಅಧಿಕಾರದಿಂದ ಕಿತ್ತೊಗೆದು ಕಾರ್ಮಿಕ ವರ್ಗದ ಅಧಿಕಾರ ಸ್ಥಾಪಿಸುವ ನಿಟ್ಟನಲ್ಲಿ ಸಂಘಟನೆ ಇನ್ನಷ್ಟು ಬಲಿಷ್ಟಗೊಳಿಸುವ್ವ ಮೂಲಕ ಮೇ ದಿನದ ಶತಮಾನೋತ್ಸವನ್ನು ಆಚರಣೆ ಮಾಡಬೇಕೆಂದ. ಹೇಳಿದರು. ದುಡಿಯುವ ವರ್ಗದವರು ಸಂಘಟನೆಯಾಗಿ ಐಕ್ಯ ಹೋರಾಟ ಮಾಡುವ ಮೂಲಕ ಹೊಸ ಸಮಾಜದ ನಿರ್ಮಾಣ ಸಾಧ್ಯವೆಂದು ಹೇಳುತ್ತಾ ದೇಶದಲ್ಲಿರುವ ಛಿದ್ರಕಾರಿ, ಕೋಮುವಾದಿ ಶಕ್ತಿಗಳ ವಿರುದ್ಧ ಕಾರ್ಮಿಕ ವರ್ಗ ಹೋರಾಟ ಮಾಡಬೇಕೆಂದು ಕರೆ ನೀಡಿದರು.

ಸುಮಾರು 1,500 ಜನರು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಸಾಮೂಹಿಕ ಭೋಜನದ ನಂತರ ಸಭೆಯು ಮುಕ್ತಾಯಗೊಂಡಿತು.

ಬಳ್ಳಾರಿ

ಮೇ ಶತಾಬ್ದಿ ಅಂಗವಾಗಿ ಬಳ್ಳಾರಿಯಲ್ಲಿ 5000 ಕರಪತ್ರಗಳನ್ನು ಹಂಚಲಾಯಿತು. ಮೇ ಒಂದರಂದು ಬಳ್ಳಾರಿಯ ಬಹುತೇಕ ಬಜಾರ್ ಬಂದ್ ಆಗಿತ್ತು. ಅಂಗಡಿಗಳ ಮತ್ತು ವ್ಯಾಪಾರ ಸಂಸ್ಥೆಗಳ ನೌಕರರ ಸಂಘದ ನೇತೃತ್ವದಲ್ಲಿ ಸುಮಾರು 400 ನೌಕರರೊಂದಿಗೆ ಬಳ್ಳಾರಿಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಬಳ್ಳಾರಿಯ ಚರಿತ್ರೆಯಲ್ಲೆ ಅಂಗಡಿಗಳ ಮತ್ತು ವ್ಯಾಪಾರ ಸಂಸ್ಥೆಗಳ ನೌಕರರಿಗೆ ಮೇ ದಿನದಂದು ರಜಾ ಸಿಕ್ಕಿರುವದು ಇದೆ ಮೊದಲನೆ ಬಾರಿ.

(ಮೆರವಣಿಗೆಯು CITU ಜಿಂದಾಬಾದ್, ಕನಿಷ್ಟವೇತನ ನಮಗೂ ಸಿಗಲಿ, ಕೇಂದ್ರ ರಾಜ್ಯ ಸರಕಾರಗಳ ಕಾರ್ಮಿಕ ವಿರೋಧಿ ನೀತಿಗೆ ಧಿಕ್ಕಾರ ಎಂಟು ಗಂಟೆಗಳ ಕೆಲಸದ ವೇಳೆ ಜಾರಿಗೆ ಬರಲಿ ಮುಂತಾದ ಘೋಷಣೆಗಳೊಂದಿಗೆ ಮುನ್ನಡೆಯಿತು. ಮಾಲೀಕರ ಒತ್ತಡಕ್ಕೆ ಕೆಲಸವನ್ನು ಮಾಡುತ್ತಿದ್ದ ಎಲ್ಲ ನೌಕರರನ್ನು ಮೆರವಣಿಗೆಯಲ್ಲಿ ಸೇರಿಸಲಾಯಿತು.)

ಮೆರವಣಿಗೆಯಲ್ಲಿ ಕಾರ್ಯದರ್ಶಿಯಾದ ಮಲ್ಲಿಕಾರ್ಜುನ ಉಪಾಧ್ಯಕ್ಷರಾದ ಚಂದ್ರಶೇಖರ್ ಮತ್ತು ಸಂಗಪ್ಪ, ಪ್ರಸನ್ನಕುಮಾರ್,ಎರ್ರಿಸ್ವಾಮಿ ನಾಯಕತ್ವ ವಹಿಸಿದ್ದರು. ಬೆಳಿಗ್ಗೆ 10ಗಂಟೆಗೆ ಪ್ರಾರಂಭವಾದ ಮೆರವಣಿಗೆಮಧ್ಯಾಹ್ನ 2-30 ಕ್ಕೆ ಬಹಿರಂಗ ಸಭೆಯಲ್ಲಿ ಮುಕ್ತಾಯವಾಯಿತು.

ಹುಬ್ಬಳ್ಳಿ

ಸುಂದತ್ತಾ, ಮೈಸೂರು ಕಿರ್ಲೋಸ್ಕರ, ಬಿ.ಡಿ.ಕೆ. ವಿಜಯದೀಪ ಫೌಂಡ್ರಿ ಮೋಪೆಡ್ಸ್ ಮತ್ತು ಇತರೇ ಅಸಂಘಟಿತ ಕಾರ್ಮಿಕರು ಮೆರವಣಿಗೆ ತೆಗೆದು ಬಹಿರಂಗ ಸಭೆ ಮಾಡಿ ಮೇ ದಿನಾಚರಣೆ ಆಚರಿಸಿದರು

ಸಿ. ಐ. ಟಿ. ಯು ಮುಖಂಡರಾದ ವಿ ಜೆ ಕೆ ನಾಯರ ಅವರು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಮೇ ಶತಾಬ್ದಿ ಆಚರಿಸುವಾಗ ನಮ್ಮ ಮುಂದಿರುವ ಜವಾಬ್ದಾರಿಯನ್ನು ಎತ್ತಿ ತೋರಿಸಿ ಯುದ್ಧದ ವಿರೋಧ, ಶಾಂತಿಗಾಗಿ ಹೋರಾಡಲು ಪಣ ತೊಡಬೇಕೆಂದು ಕರೆ ನೀಡಿದರು. ವಿ. ಎಸ್. ಕಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು ವಿ. ಎಂ. ಪೂಜಾರ, ಜೋಸೆಫ್ ಮೊದಲಾದವರು ಭಾಷಣ ಮಾಡಿದರು.

ಮುಳಬಾಗಿಲು

ಮಹಿಳೆಯರ, ವಿದ್ಯಾರ್ಥಿ ಯುವಜನರ ರೈತ ಕಾರ್ಮಿಕರ ಬೃಹತ ಮೆರವಣಿಗೆಯೊಂದಿಗೆ ಮೇ ಶತಮಾನೋತ್ಸವ ಆಚರಿಸಲ್ಪಟ್ಟಿತು. ಶಾಸಕ ವೆಂಕಟ್ರಾಮಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ ಬಹಿರಂಗಸಭೆಯಲ್ಲಿ ರೈತಸಂಘದ ಕಾರ್ಯದರ್ಶಿ ಬಿ. ವಿ. ನಾಗಿರೆಡ್ಡಿ, ಯುವಕ ಸಂಘಟನೆಯ ಸಂಚಾಲಕ ಬಾಬು, ಎಸ್. ಎಫ್. ಐ. ಯ ಶಿವಶಂಕರ, ಬೀಡಿ ಕಾರ್ಮಿಕ ಮುಖಂಡ ನೂರಜಾನ್, ಸಿ. ಪಿ. ಐ. (ಎಂ) ನ ಎಂ. ಗೋಪಾಲ್ ಮೊದಲಾದವರು ಮಾತನಾಡಿದರು.

ಗುಲ್ಬರ್ಗಾ

ಗುಲಬರ್ಗಾ ನಗರದ ನಾಲ್ಕು ವಾರ್ಡಗಳ ಪ್ರತಿಯೊಂಮ ಮನೆಯ ಮೇಲೆ ಹಾಗೆಯೇ ನಗರದ ಪ್ರಮುಖ ಬೀದಿ,ಚೌಕಗಳಲ್ಲಿ ಕೆಂಬಾವುಟ ಹಾರಾಡುತ್ತಿರುವ ರಮ್ಯದೃಶ್ಯದಲ್ಲಿ ಮೇ ಶತಮಾನೋತ್ಸವ ಆಚರಿಸಲ್ಪಟ್ಟಿತು. ಎಂ. ಎಸ್. ಕೆ. ಮಿಲ್ ಕೆಲಸಗಾರರಲ್ಲದೆ. ಇತರ ನೌಕರದಾರರೆಲ್ಲ ಸೇರಿ ಮೆರವಣಿಗೆ ನಡೆಸಿ ಬಹಿರಂಗ ಸಭೆ ಮಾಡಿದರು. ಸಿಪಿಐ (ಎಂ) ಮುಖಂಡರಾದ ಮಹಮ್ಮದ್ ಹಸನ್‌ಖಾನ್, ಸಿ. ಎ. ಪಾಟೀಲ್ ಮತ್ತಿನ್ನಿತರರು ಭಾಷಣ ಮಾಡಿ ಶತಮಾನೋತ್ಸವದ ಮಹತ್ವ ವಿವರಿಸಿದರು.

ಶಹಬಾದ್

ಎ. ಬಿ. ವಿ. ಕಾರ್ಖಾನೆಯಿಂದ ಕಾಲೋನಿಯವರಿಗೆ ಹಾಗೆಯೇ ಕಾಲೋನಿ ತುಂಬ ಕೆಂಬಾವುಟ ರಾರಾಜಿಸುತ್ತಿರುವಂತೆಯೇ ಮೇ ಶತಮಾನೋತ್ಸವ ಹೊಸ ಹಸನ್ಮುಖದಿಂದ ಆಚರಿಸಲ್ಪಟ್ಟಿತು. ಸಂಜೆ ನಡೆದ ಸಭೆಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ. ಎನ್. ಜಿ. ಮಳಕುಂದಿ, ಸಿ. ಎ. ಪಾಟೀಲ್, ಮೊದಲಾದವರು ಭಾಷಣ ಮಾಡಿದರು.3,00 ಕ್ಕಿಂತಲೂ ಹೆಚ್ಚು ಕಾರ್ಮಿಕರು ನೆರೆದಿದ್ದರು. ಕೊನೆಯಲ್ಲಿ ಗುಲಬರ್ಗಾ ಸಮುದಾಯ ಘಟಕದಿಂದ "ಗೋದಾನ" ನಾಟಕ ಪ್ರದರ್ಶಿಸಲಾಯಿತು.

ಬೆಳಗಾವಿ, ನಿಪ್ಪಾಣಿಯಲ್ಲಿ ಹಿಂಸಾಚಾರ

ಸಿ. ಪಿ. ಐ. (ಎಂ) ಖಂಡನೆ

ಸಂಕೇಶ್ವರದಲ್ಲಿ ಶಿವಾಜಿ ಪ್ರತಿಮೆಗೆ ಅಗೌರವ ಮಾಡಲಾಯಿತೆಂಬ ಮರಾಠಿ ಪತ್ರಿಕೆಯ ಸುದ್ದಿಯನ್ನು ಆಧರಿಸಿ ಕೆಲವು ಸಮಾಜ ದ್ರೋಹಿಗಳು ಹಾಗೂ ಮಹಾರಾಷ್ಟ್ರ ಏಕೀಕರಣ ಸಮಿತಿ ಪರ ಜನರು ನಿಪ್ಪಾಣಿ, ಬೆಳಗಾವಿ, ಕೊಲ್ಲಾಪುರಗಳಲ್ಲಿ ಕೇಂದ್ರ, ರಾಜ್ಯ ಹಾಗೂ ಸಾರ್ವಜನಿಕ ಆಸ್ತಿ ಪಾಸ್ತಿಗಳ ಮೇಲೆ ಮತ್ತು ನಿರಪರಾಧಿ ಜನರ ಮೇಲೆ ನಡೆಸಿದ ಹಿಂಸಾಚಾರವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬಲವಾಗಿ ಖಂಡಿಸುತ್ತದೆ. ಪಂಜಾಬ್ ಮತ್ತಿನ್ನಿತರ ಕಡೆಗಳಲ್ಲಿ ಭಯೋತ್ಪಾದಕ, ಛಿದ್ರಕಾರಿ ಶಕ್ತಿಗಳು ಕಾಯಿದೆ, ಕಾನೂನು ಶಾಂತಿಯನ್ನು ದಿನ ನಿತ್ಯ ಕಬಳಿಸಿ, ನಿರಪರಾಧಿಗಳನ್ನು ಕೊಲೆ ಮಾಡಿ ದೇಶದ ಐಕ್ಯತೆಗೆ ಸವಾಲನ್ನೇ ಒಡ್ಡುತ್ತಿರುವಾಗ, ಕರ್ನಾಟಕ-ಮಹಾರಾಷ್ಟ್ರ ಗಡಿ ಪ್ರದೇಶದಲ್ಲೂ ವದಂತಿಗಳನ್ನಾಧರಿಸಿ ಹಿಂಸಾಕೃತ್ಯ ನಡೆಸುತ್ತಿರುವುದು ಅಪಾಯಕಾರಿಯಾಗಿದೆ. ಶಿವಾಜಿ ಪ್ರತಿಮೆಗೆ ಅಪಮಾನ ಮಾಡಲಾಗಿದೆಂಬುದನ್ನು ಪೂರ್ಣ ವಿಚಾರಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕಲ್ಲದೆ ಹಿಂಸಾಚಾರಕ್ಕಿಳಿಯುವುದು ಸಮಂಜಸವಲ್ಲ. ಅದು ಹೇಯಕೃತ್ಯ. ಮಹಾರಾಷ್ಟ್ರ ಏಕೀಕರಣ ಸಮಿತಿ ಮತ್ತು ಶಿವಸೇನೆಯ ಮುಖಂಡರು ಇತ್ತೀಚೆಗೆ ಗಡಿ ಸಮಸ್ಯೆ ಕುರಿತು ಪ್ರಚೋದನಾತ್ಮಕ ಹೇಳಿಕೆಗಳನ್ನು ನೀಡುತ್ತಿರುವುದು ಈ ಹಿಂಸಾಚಾರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದಂತಾಗಿದೆ. ಎಲ್ಲ ವಿಚಾರವಂತ ಪ್ರಜಾಪ್ರಭುತ್ವ ಶಕ್ತಿಗಳು ಈ ಹಿಂಸಾಕೃತ್ಯ ಖಂಡಿಸಿ, ಶಾಂತಿ ನೆಲೆಸಲು, ಸೌಹಾರ್ದ ಭಾವನೆ ಉಂಟು ಮಾಡಲು ಸಹಕರಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಕರೆಕೊಡುತ್ತದೆ. ಕರ್ನಾಟಕ-ಮಹಾರಾಷ್ಟ್ರ ಸಮಸ್ಯೆಯ ಪರಿಹಾರಕ್ಕೆ ಶಾಂತಿಯುತ, ಪ್ರಜಾಸತ್ತಾತ್ಮಕ ನಿಲುಮೆ ತಾಳಬೇಕಲ್ಲದೆ ಭಾಷಾ ದ್ವೇಷವನ್ನು ಬೆಳೆಸುವುದು ರಾಷ್ಟ್ರದ ಮತ್ತು ಜನಹಿತದ ವಿರೋಧವಾಗಿದೆ. ಕರ್ನಾಟಕ - ಮಹಾರಾಷ್ಟ್ರ ಗಡಿ ಪ್ರದೇಶದಲ್ಲಿ ಶಾಂತಿ ಕಾಪಾಡಲು ಕೇಂದ್ರ ಹಾಗೂ ಕರ್ನಾಟಕ - ಮಹಾರಾಷ್ಟ್ರ ಸರಕಾರಗಳು ಯೋಗ್ಯಕ್ರಮ ಕೈಗೊಳ್ಳಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಒತ್ತಾಯಿಸುತ್ತದೆ.

ಭಯೋತ್ಪಾದಕ ಛಿದ್ರಕಾರಿ ಶಕ್ತಿಗಳು ದೇಶವನ್ನು ವಿಭಜನೆ ಮಾಡುವ, ದುರ್ಬಲಗೊಳಿಸುವ ಪ್ರಯತ್ನದಲ್ಲಿರುವಾಗ, ದೇಶದ ಸಾರ್ವಭೌಮತ್ವವನ್ನು ಸ್ವಾತಂತ್ರ್ಯವನ್ನು ಕಾಪಾಡುವುದು, ಪ್ರತಿಯೊಬ್ಬನ ಕರ್ತವ್ಯವಾಗಿರುವಾಗ, ನಿಪ್ಪಾಣಿ-ಬೆಳಗಾವಿಯಂಥ ಘಟನೆಗಳು ಜನರ ಗಮನವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನವಾಗಿದೆ. ಆದ್ದರಿಂದ ಎಲ್ಲಾ ಶಕ್ತಿಯಿಂದ ಅಂಥವುಗಳನ್ನು ವಿರೋಧಿಸಲೇಬೇಕೆಂದು ಸಿ.ಪಿ.ಐ (ಎಂ) ಕರೆ ಕೊಡುತ್ತದೆ.

ಮುಸ್ಲಿಂ ಮಹಿಳೆಯರಿಗೆ ದ್ರೋಹ

(1ನೇ ಪುಟದಿಂದ)

ಆಜ್ಞೆಯನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷ ಹೊರಡಿಸಬೇಕಾಯಿತು. ಪ್ರಜಾಪ್ರಭುತ್ವವನ್ನು ಕೊಲೆಮಾಡುವ, ಜಾತೀಯತೆಗೆ ಪ್ರೋತ್ಸಾಹ ನೀಡುವ, ಮುಸ್ಲಿಂ ಮಹಿಳೆಯರನ್ನು ನಿರ್ಗತಿಕರನ್ನಾಗಿ ಮಾಡುವ ಅತ್ಯಂತ ನಾಚಿಕೆಗೇಡಿ ಮಸೂದೆಯನ್ನು ಲೋಕ ಸಭೆಯಲ್ಲಿ ಮಂಜೂರುಮಾಡಲಾಯಿತು. ಮತೀಯ ಪೆಡಂಭೂತಕ್ಕೆ ದುಂಬಾಲು ಬಿದ್ದ ರಾಜೀವ ಗಾಂಧಿಯವರ ಅವಹೇಳನ ಧೋರಣೆಯನ್ನು ಇದು ಪ್ರದರ್ಶಿಸುತ್ತದೆ.

ಜಾತ್ಯಾತೀತ ರಾಷ್ಟ್ರ, ಜಾತ್ಯಾತೀತ ಪಕ್ಷವೆಂದು ಘೋಷಿಸುತ್ತಾ ಮತೀಯ ಶಕ್ತಿಗಳನ್ನು ಪ್ರೋತ್ಸಾಹಿಸಿ, ಅವುಗಳಿಗೆ ಸೌಕರ್ಯಗಳನ್ನೊದಗಿಸಿ ಅವುಗಳ ಉದ್ಧಾರಕ ತಾನೊಬ್ಬನೇ ಎಂದು ಹೇಳಿಕೊಂಡು ಕಾಂಗ್ರೆಸ್ ಇಷ್ಟು ಚುನಾವಣೆಗಳಲ್ಲಿ ಗೆಲ್ಲುತ್ತ ಬಂದಿತ್ತು. ಜಾತೀಯವಾದಿ ಪಕ್ಷಗಳ ಬೆಂಬಲದಿಂದಲೇ ಕೇರಳದಲ್ಲಿ ಅಧಿಕಾರ ನಡೆಸುತ್ತಿದೆ. ಕಾಶ್ಮೀರದಲ್ಲಿ ಆ ಶಕ್ತಿಗಳಿಗೆ ಪ್ರಚೋದನೆ ನೀಡಿ ತಾನು ಅಧಿಕಾರಕ್ಕೆ ಬರಲು ಹವಣಿಸುತ್ತಿದೆ. ಅಂಥ ಹಿಂದೂ—ಮುಸ್ಲಿಂ ಮೂಲಭೂತವಾದಿಗಳ ಬೆಂಬಲ, ಸಹಾನುಭೂತಿ ಇಲ್ಲದಿದ್ದರೆ ಕಾಂಗ್ರೆಸ್ ಇಷ್ಟೊತ್ತಿಗೆ ಅಧಿಕಾರ ಕಳೆದುಕೊಳ್ಳುತ್ತಿತ್ತು.

ಶಹಾಬಾನು ಖಟ್ಲೆಯ ತೀರ್ಮಾನವೇ ಅಸ್ಸಾಂ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿಗೆ ಕಾರಣವೆಂದು ರಾಜೀವಗಾಂಧಿಯವರ ಸಲಹೆಗಾರರು ಹೇಳಿದ್ದರಿಂದಲೇ, ತನ್ನ ಪಕ್ಷದೊಳಗೆ ಹಾಗೆಯೇ ಭಾರತ ದೇಶಾದ್ಯಂತ ಪ್ರಬಲವಾದ ವಿರೋಧ ಕಂಡು ಬಂದರೂ ಕೂಡ ಮುಸ್ಲಿಂ ಮಹಿಳೆಯರ ವಿಧೇಯಕವನ್ನು ಅವಸರದಿಂದಲೇ ಲೋಕಸಭೆಯಲ್ಲಿ ಮಂಜೂರು ಮಾಡಿಸಿಕೊಂಡರು.

ಜನರ ಮುಂದಿರುವ ಪ್ರಶ್ನೆ ಅತ್ಯಂತ ಸರಳವಾಗಿದೆ. ಭಾರತದ ಸಂವಿಧಾನದ ಮತ್ತು ನ್ಯಾಯಾಂಗ ಪದ್ಧತಿಯಂತೆ ಒಬ್ಬ ಮುಸ್ಲಿಂ ಮಹಿಳೆ, ಗಂಡನಿಂದ ಪರಿತ್ಯಜಿಸಲ್ಪಟ್ಟಾಗ, ಉದರ ಪೋಷಣೆಯ ಹಕ್ಕನ್ನು ಹೊಂದಿದ್ದಾಳೋ ಇಲ್ಲವೋ ? ಗಂಡ ಬಿಟ್ಟನಂತರ ಜೀವನ ನಡೆಸಲು ಯಾವ ಆಧಾರವೂ ಹಕ್ಕೂ ಇಲ್ಲದವಳಾಗಿರಬೇಕೆ ? ಆ ರೀತಿಯ ಹಕ್ಕನ್ನು ಕೊಡುವುದು ಧರ್ಮಕ್ಕೆ ವಿರುದ್ಧವಾಗಿದೆಂದು ಮೂಲಭೂತ ವಾದಿಗಳ ವಾದ. ರಾಜೀವ್ ಗಾಂಧಿ ಅಂಥ ವಾದಕ್ಕೆ ಮಣಿದು ಗಂಡ ತ್ಯಜಿಸಿದ ಮುಸ್ಲಿಂ ಮಹಿಳೆಯರಿಗೆಲ್ಲಾ ಭಿಕ್ಷೆಯಾದರೂ ಬೇಡಿರಿ, ಸೂಳೆಗಾರಿಕೆಗಾದರೂ ಇಳಿಯಿರಿ ಅದೇ ನನ್ನ ಆಶೀರ್ವಾದವೆಂದು ಹೇಳುವ ಪರಿಸ್ಥಿತಿ ಗಳಿಸಿದ್ದಾರೆ. ರಾಜೀವ್‌ಗಾಂಧಿಯವರ ಈ ನೀತಿ ನಾಳೆ ಕ್ರಿಶ್ಚಿಯನ್, ಜೈನ್, ಪಾರ್ಸಿ, ಸಿಖ್ ಮತ್ತಿನ್ನಿತರ ಜಾತಿಯವರು ಕೂಡ ಭಾರತ ಸಂವಿಧಾನ ಬಿಟ್ಟು ತಮಗೆಲ್ಲ ಪ್ರತ್ಯೇಕವಾದ ಕಾನೂನೇ ಬೇಕೆಂದು ವಾದಿಸಿ ಚಳುವಳಿ ಹೂಡಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಪ್ರತ್ಯೇಕತಾವಾದಿಗಳ, ಛಿದ್ರಕಾರಿಗಳ, ಭಯೋತ್ಪಾದಕರ, ಅಸ್ಸಾಮಿಯರ ಚಳುವಳಿಗೆ, ನಮ್ಮ ಧರ್ಮ ನಮಗೆ, ನಮ್ಮ ಜಾತಿ ನಮಗೆ, ಭಾರತ ದೇಶ ನಮಗೇನೂ ಸಂಬಂಧವಿಲ್ಲ. ದೇಶದ ಸಮಗ್ರತೆ, ಸಂವಿಧಾನ, ನ್ಯಾಯಾಂಗ ನಮಗೆ ಬೇಡವೆಂಬ ಘೋಷಣೆಯ ಹೊಸ ಗಂಡಾಂತರಕ್ಕೆ ರಾಜೀವ್ ಗಾಂಧಿಯ ನೀತಿ, ಹಿಂದೂ—ಮುಸ್ಲಿಂ ಮೂಲಭೂತವಾದಿಗಳ ವಾದ ದಾರಿಮಾಡಿಕೊಡುತ್ತದೆ. ಅಂಥ ವಿಚಾರಧಾರೆಯ ವಿರುದ್ಧ, ಮುಸ್ಲಿಂ ಮಹಿಳೆಯರ ವಿಧೇಯಕದ ವಿರುದ್ಧ ಸಂಘಟಿತ ಚಳುವಳಿ ನಡೆಸಿ, ದೇಶದ ಮುಸ್ಲಿಂ ಮಹಿಳೆಯರ ರಕ್ಷಣೆ ಮಾಡುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಓದುಗರ ಗಮನಕ್ಕೆ

ಕೆಲವು ತಾಂತ್ರಿಕ ತೊಂದರೆಗಳಿಂದಾಗಿ ಮೇ ಶತಮಾನೋತ್ಸವದ ವಿಶೇಷಾಂಕವನ್ನು ಸಕಾಲದಲ್ಲಿ ಓದುಗರಿಗೆ ತಲ್ಪಿಸಲು ಹಾಗೆಯೇ 11-5-86 ರ ಸಂಚಿಕೆಯನ್ನು ಪ್ರಕಟಿಸಲು ಸಾಧ್ಯವಾಗದಿದ್ದಕ್ಕೆ ವಿಷಾದಿಸುತ್ತೇವೆ.

— ಸಂಪಾದಕ ಮಂಡಲಿ

ಸಾರ್ವಜನಿಕ ಕ್ಷೇತ್ರದ ವಿರುದ್ಧ ಒಳಸಂಚು

(1ನೇ ಪುಟದಿಂದ)

ಆಡಳಿತೆಯ ಅಸಮರ್ಪಕತೆ ಹಾಗೂ ಗೊಂದಲವೇ ಇಂದು ಸಾರ್ವಜನಿಕ ಕ್ಷೇತ್ರ ಎದುರಿಸುತ್ತಿರುವ ಮುಖ್ಯ ಸಮಸ್ಯೆಯಾಗಿದೆಂಬುದನ್ನು ಕಮಿಟಿ ನಿರಾಕರಿಸಿದೆ. ದ್ವಿಪಕ್ಷೀಯ ಚರ್ಚೆಯ ಮೂಲಕ ಬೇಡಿಕೆಗಳನ್ನು ಬಗೆಹರಿಸದೆ, ವೇತನ ಮಂಡಳಿಗಳ ನೇಮಕ, ಆರ್ಥಿಕವಾಗಿ ಕುಂಠಿತಗೊಂಡ ಕಾರ್ಖಾನೆಗಳನ್ನು ಮುಚ್ಚಿ ಅವುಗಳಿಗೆ ಉದಾರ ಪರಿಹಾರಧನ ಕೊಡುವುದು, ಕಾರ್ಮಿಕರ ಮೇಲೆ ಕೆಲಸದ ಭಾರ ಹೇರುವುದು, ಉತ್ಪಾದನೆಗನುಸರಿಸಿ ವೇತನ ನೀಡುವುದು, ಬಂಡವಾಳ ಹೂಡುವಿಕೆಯಲ್ಲಿ ಜಿಪುಣತನ, ಆ ಕೈಗಾರಿಕೆಗಳ ಮೇಲೆ ಲೋಕಸಭೆಯ ಉಸ್ತುವಾರಿಯನ್ನು ಬಿಟ್ಟು ಬಿಡುವುದು. ಇವೇ ಆ ಕಮಿಟಿಯ ಕೆಲವು ಶಿಫಾರಸುಗಳಾಗಿವೆ. ಹಿಂದುಸ್ಥಾನ್ ಸ್ಟೀಲ್ ವರ್ಕ್ಸ್ ಕನ್‌ಸ್ಟ್ರಕ್ಷನ್, ಇಂಜಿನಿಯರಿಂಗ ಪ್ರೋಜಕ್ಟ್ಸ್, ಸೈಕಲ್ ಕಾರ್ಪೊರೇಶನ್‌ಗಳನ್ನು ಮುಚ್ಚುವ ಪ್ರಯತ್ನ ನಡೆದಿದೆ. ಇನ್ನೂ ಹಲವಾರು ಕೈಗಾರಿಕೆಗಳು ಇದೇ ಸಾಲಿನಲ್ಲಿ ಸೇರಿವೆ. ರೂ. 43,000 ಕೋಟಿಯಷ್ಟು ಈ ಕ್ಷೇತ್ರದಲ್ಲಿ ಬಂಡವಾಳ ಹೂಡಲಾಗಿದೆ. ಅದೆಲ್ಲ ಜನರ ಹಣ, ಜನರ ಈ ಹಣವನ್ನು ಬೆಳೆಸುವ ಜವಾಬ್ದಾರಿ ಕಾರ್ಮಿಕರದು. ಅಸಮರ್ಪಕ ಯೋಜನೆ, ಭ್ರಷ್ಟ ಅಧಿಕಾರಿಗಳ, ನೌಕರಶಾಹಿ ಹಿಡಿತದಿಂದಾಗಿ ತಾವು ಎಷ್ಟು ಹಣ ಉತ್ಪಾದಿಸಬೇಕಾಗಿತ್ತೋ ಅಷ್ಟನ್ನು ಉತ್ಪಾದಿಸಲು ಸಾಧ್ಯವಾಗುತ್ತಿಲ್ಲ, ಈ ವಿಷಯಗಳನ್ನು ಮುಚ್ಚಿಟ್ಟು ಅವುಗಳ ಹಾನಿಗೆ ಕಾರ್ಮಿಕರನ್ನು ತೆಗಳಲಾಗುತ್ತಿದೆ. ಕಾರ್ಮಿಕ ವರ್ಗ ಈ ಆಹ್ವಾನವನ್ನು ಸ್ವೀಕರಿಸಲು ಸಿದ್ಧವಿದೆ. ಹಾಗಾಗಬೇಕಾದರೆ ಕೇಂದ್ರ ಸರಕಾರ ಸಾರ್ವಜನಿಕ ಕ್ಷೇತ್ರವನ್ನು ಪ್ರಜಾಪ್ರಭುತ್ವೀಕರಣಗೊಳಿಸಬೇಕು, ಡೈರೆಕ್ಟರರ ಮಂಡಳಿಯಲ್ಲಿ ಗುಪ್ತ ಮತದಾನದ ಮೂಲಕ ಸರಿಸಮಾನ ತಳಹದಿಯಲ್ಲಿ ಕಾರ್ಮಿಕ ಪ್ರತಿನಿಧಿಗಳನ್ನು ತೆಗೆದುಕೊಳ್ಳಲು ತಯಾರಾಗಬೇಕು. ಕೇಂದ್ರ ಸರಕಾರ ಅದಕ್ಕೆ ತಯಾರಿಲ್ಲ.

ಸಾರ್ವಜನಿಕ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಕಾರ್ಮಿಕ ವರ್ಗ ಹಲವಾರು ಸೂಚನೆಗಳನ್ನು ಮುಂದೆ ಮಾಡಿದೆ ಸರಕಾರ ಅವುಗಳನ್ನೊಪ್ಪದಿರುವುದರಿಂದ ಹೋರಾಟವಲ್ಲದೆ ಬೇರೆ ಮಾರ್ಗವಿಲ್ಲದಂತಾಗಿದೆ.

ದೇಶದ ಆರ್ಥಿಕತೆಯಲ್ಲಿ ಸಾರ್ವಜನಿಕ ಕ್ಷೇತ್ರ ತನ್ನ ಅಭಿಮಾನದಸ್ಥಾನ ಪಡೆಯಬೇಕೆಂದು ಒತ್ತಾಯಿಸಲು ದೇಶಾದ್ಯಂತ ಚಳುವಳಿ ನಡೆಸಲಾಗುವುದು. ಪರಿಸ್ಥಿತಿ ಅತಿ ಗಂಭೀರವಾಗಿರುವುದರಿಂದ ಕಾರ್ಮಿಕ ವರ್ಗ ನಿರಂತರ ಹೋರಾಟ ನಡೆಸುವುದು ಅತ್ಯಗತ್ಯವೆಂದು ಸೂರ್ಯನಾರಾಯಣರಾವ್ ಅವರು ಹೇಳಿ 21-6-86 ರಂದು ಬೆಂಗಳೂರಿನ ಟೌನ್ ಹಾಲಿನಲ್ಲಿ "ಸಾರ್ವಜನಿಕ ಕ್ಷೇತ್ರ ರಕ್ಷಿಸಿರಿ" ದಿನಾಚರಣೆ ಆಚರಿಸಲಾಗುವುದೆಂದೂ ಸಿ. ಐ. ಟಿ. ಯು ಅಧ್ಯಕ್ಷರಾದ ಬಿ. ಟಿ. ರಣದಿವೆಯವರು ಅದರಲ್ಲಿ ಭಾಗವಹಿಸುವರೆಂದೂ ಹೇಳಿದರು.

ಬೀದರ್‌ನಲ್ಲಿ ಮೇ ದಿನಾಚರಣೆ

ಬೀದರಿನ ಇತ್ತೀಚಿನ ಚರಿತ್ರೆಯಲ್ಲೇ ಅಪೂರ್ವವಾದ ಮೇ ದಿನಾಚರಣೆಯ ಶತಮಾನೋತ್ಸವ ಅತ್ಯುತ್ಸಾಹದಿಂದ ಆಚರಿಸಲ್ಪಟ್ಟಿತು. ಕಾರಂಜಿ ಯೋಜನೆಯ, ಖಂಡಸಾರಿ ಸಕ್ಕರೆ ಕಾರ್ಖಾನೆಯ, ಅರಣ್ಯ, ಲೋಕೋಪಯೋಗಿ, ನಗರಸಭೆ, ಕೃಷಿಕಾರ್ಮಿಕರನ್ನೊಳಗೊಂಡು ನೂರಾರು ಕಾರ್ಮಿಕರು, ಮಹಿಳೆಯರನ್ನೊಳಗೊಂಡು ಘೋಷಣೆ ಮೆರವಣಿಗೆ ತೆಗೆದು ಬಂಡವಳಶಾಹಿ ಸಮಾಜದ ಬದಲಾಗಿ ಸಮಾಜವಾದಿ ಸಮಾಜ ರಚಿಸುವ ದೃಢನಿರ್ಧಾರದೊಡನೆ ಮೇ ದಿನಾಚರಣೆ ಆಚರಿಸಿದರು. ಸಿ.ಪಿ.ಐ. (ಎಂ) ಮುಖಂಡರಾದ ಎನ್ ಕೆ ಉಪಾಧ್ಯಾಯರು ತಮ್ಮ ಭಾಷಣದಲ್ಲಿ ಮೇ ದಿನದ ಚರಿತ್ರೆಯನ್ನು, ಕಾರ್ಮಿಕರ ಹೋರಾಟದಿಂದ ನಡೆದ ಕ್ರಾಂತಿಗಳನ್ನು ವಿವರಿಸಿ ಭಾರತ ದೇಶದಲ್ಲಿ ಕೂಡ ಕಾರ್ಮಿಕರನ್ನು ಜನರನ್ನೂ ಸುಲಿಯುವ ಕಾಂಗ್ರೆಸ್ ಸರಕಾರದ ವಿರುದ್ಧ ನಿರಂತರ ಹೋರಾಟ ನಡೆಸಿ ಕಾರ್ಮಿಕ ವರ್ಗದ ನೇತೃತ್ವದ ಸರಕಾರ ರಚಿಸಲು ಸಂಕಲ್ಪ ಕೈಗೊಳ್ಳಬೇಕೆಂದು ಹೇಳಿದರು. ಕಾರ್ಮಿಕ ಮುಖಂಡರಾದ ಸಂಗ್ರಾಮ ಅವರು ಕೆಲಸಗಾರರ ಮೇಲಾಗುತ್ತಿರುವ ಅನ್ಯಾಯಗಳನ್ನು ವಿವರಿಸಿ ಚಿಕಾಗೋ ನಗರದ ಕಾರ್ಮಿಕರ ಹೋರಾಟವನ್ನು ವಿವರಿಸಿ; ಸಾಮ್ರಾಜ್ಯಶಾಹಿ; ಬಂಡವಾಳದಾರರ ವಿರುದ್ಧ ಐಕ್ಯ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಸಿ.ಪಿ.ಐ. ಮುಖಂಡರಾದ ವಿ. ಎನ್. ಪಾಟೀಲ ಹಾಗೂ ಬೀದರ್ ಶಾಸಕರು ಭಾಷಣ ಮಾಡಿದರು.

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053
Editorial and manageriel office: L-56, K. V. Temple Street, Sultan pet B-53 Phone : 75331
Editor P. Ramachandra Rao
Managing Editor : N K Upadhyaya